ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮಹಿಳಾ ಏಕದಿನ ವಿಶ್ವಕಪ್ ವಿಜೇತ ಭಾರತ ತಂಡದ ಸದಸ್ಯರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗುರುವಾರ ರಾಷ್ಟ್ರಪತಿ ಭವನದಲ್ಲಿ ಭೇಟಿ ಮಾಡಿದರು. ತಂಡದ ಸದಸ್ಯರ ಸಹಿ ಇರುವ ಜೆರ್ಸಿಯನ್ನು ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ರಾಷ್ಟ್ರಪತಿಗೆ ನೀಡಿದರು.

07 ನವೆಂಬರ್ 2025 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 237 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಕ್ರಿಸ್ಮಸ್ ಹಬ್ಬಕ್ಕೆ ಬಾಕ್ಸಾಫೀಸ್ ಸಮರ » 2



ಆರ್‌ಎಸ್‌ಎಸ್ ಜಟಾಪಟಿ : ಸರ್ಕಾರಕ್ಕೆ ಮತ್ತೆ ಮುಖಭಂಗ » 3



ನಿವೇಶನ ಅಳತೆ ವೇಳೆ ಉದ್ವಿಗ್ನ ಪರಿಸ್ಥಿತಿ : ಕರ್ತವ್ಯಕ್ಕೆ ಅಡ್ಡಿ » 4

# ಎಫ್‌ಆರ್‌ಪಿ ನಿಗದಿ ಚರ್ಚಿಸಲು ಪ್ರಧಾನಿಗೆ ಪತ್ರ

## ಟನ್ ಕಬ್ಬಿಗೆ 3,200 ರೂ. ಬೆಲೆ ನೀಡಲು ರಾಜ್ಯ ಸರ್ಕಾರ ಸಿದ್ಧ। ಮುಖ್ಯಮಂತ್ರಿ ಸಿದ್ದರಾಮಯ್ಯ

• ಪ್ರಜೋದಯ ವರದಿ

**ಬೆಂಗಳೂರು:** ಕಬ್ಬು ಬೆಳೆಗಾರರ ಪ್ರತಿಭಟನೆ ತಾರಕಕ್ಕೇರಿರುವ ಹಿನ್ನಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ತುರ್ತು ಸಚಿವ ಸಂಪುಟ ಸಭೆ ಕರೆದು ಸಮಸ್ಯೆಯ ಬಗ್ಗೆ ಚರ್ಚೆ ನಡೆಸಿದರು.

ಬಹು ನಿರೀಕ್ಷಿತ ಸಂಪುಟ ಸಭೆಯಲ್ಲಿ ಕಬ್ಬು ಬೆಳೆಗಾರರ ಸಮಸ್ಯೆಗಳು, ಅವರ ಬೇಡಿಕೆ ಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಾವು ಪ್ರತಿ ಟನ್‌ಗೆ 3,200 ರೂ. ಬೆಲೆ ನಿಗದಿ ಪಡಿಸಲು ಸಿದ್ಧರಿದ್ದೇವೆ. ಎಫ್‌ಆರ್‌ಪಿ ನಿಗದಿ ಬಗ್ಗೆ ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ಭೇಟಿಗೆ ಸಮಯ ಕೇಳುತ್ತೇನೆ. ಸಮಯ ನೀಡಿದರೆ ಪ್ರಧಾನಿಯನ್ನು ನೇರವಾಗಿ ಭೇಟಿ ಮಾಡಿ ಅವರಿಗೆ ರೈತರ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿ ಚರ್ಚಿಸುತ್ತೇನೆಂದರು.

ಶುಕ್ರವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಬೆಂಗಳೂರಿನ ಎಲ್ಲಾ ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಸಭೆ ಕರೆದಿದ್ದೇನೆ. ಅಲ್ಲಿ ರೈತರ ಪ್ರತಿಭಟನೆ ಮತ್ತು ಹೆಚ್ಚಿನ ಎಫ್‌ಆರ್‌ಪಿ ಬೇಡಿಕೆಯ ಬಗ್ಗೆ ಚರ್ಚಿಸುತ್ತೇನೆ. ನಂತರ ಮಧ್ಯಾಹ್ನ 1.30 ಕ್ಕೆ ರೈತ ಮುಖಂಡರ ಸಭೆಯನ್ನು ಕರೆಯಲಾಗಿದೆ. ಪ್ರತಿಭಟನೆ ನಡೆಯುತ್ತಿರುವ ಜಿಲ್ಲೆಯ ರೈತ ಮುಖಂಡರನ್ನೂ ಸಭೆಗೆ ಆಹ್ವಾನಿಸಲಾಗಿದೆ. ಸಭೆಯ ನಂತರ ಪ್ರಧಾನಿ ಮೋದಿಗೆ ಪತ್ರ ಬರೆಯುತ್ತೇನೆ. ಸಮಯ ನೀಡಿದರೆ ಪ್ರಧಾನಿಯನ್ನು ನೇರವಾಗಿ ಭೇಟಿ ಮಾಡಿ ಅವರಿಗೆ ರೈತರ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿ ಚರ್ಚಿಸುತ್ತೇನೆ ಎಂದರು.

ರೈತರ ಪ್ರತಿಭಟನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ನಮ್ಮದು ರೈತರ ಪರವಾದ ಸರ್ಕಾರ. ಸತೀಶ್ ಜಾರಕಿಹೊಳಿ ಹಾಗು ಲಕ್ಷ್ಮೀ

» ನಾಲ್ಕನೇ ಪುಟದಲ್ಲಿ

**ಪ್ರಮುಖಾಂಶಗಳು**

- ★ ತಾರಕಕ್ಕೇರಿದ ಕಬ್ಬು ಬೆಳೆಗಾರರ ಪ್ರತಿಭಟನೆ
- ★ ತುರ್ತು ಸಚಿವ ಸಂಪುಟ ಸಭೆಯಲ್ಲಿ ಚರ್ಚೆ
- ★ ಇಂದು ಕಾರ್ಖಾನೆ ಮಾಲೀಕರು, ರೈತರೊಂದಿಗೆ ಸಭೆ



### ಸಿದ್ದರಾಮಯ್ಯ ಹೇಳಿಕೆಗೆ ಬಿಜೆಪಿ ಕಿಡಿ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ಭೇಟಿಗೆ ಸಮಯ ಕೇಳುತ್ತೇನೆಂಬ ಸಿದ್ದರಾಮಯ್ಯ ಹೇಳಿಕೆ ವಿರುದ್ಧ ಬಿಜೆಪಿ ಕಿಡಿಕಾರಿದೆ.
ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಸರ್ವರೋಗಕ್ಕೂ ಒಂದೇ ಮದ್ದು, ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡುವುದು ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ಕಬ್ಬು ಬೆಳೆಗಾರರು ಕಳೆದ ಒಂದು ವಾರದಿಂದ ನಡೆಸುತ್ತಿರುವ ಪ್ರತಿಭಟನೆಯ ಬಿಸಿ ಸರ್ಕಾರಕ್ಕೆ ತಟ್ಟುತ್ತಿದ್ದಂತೆ ಗಾಢ ನಿದ್ದೆಯಿಂದ ಎದ್ದಿರುವ ಸಿದ್ದರಾಮಯ್ಯ ಸರ್ಕಾರ ಎಂದಿನಂತೆ ಕಾಟಾಚಾರದ ಸುದ್ದಿಗೋಷ್ಠಿ ಮಾಡಿ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ಕೈತೊಳೆದುಕೊಳ್ಳುವ ಪ್ರಯತ್ನ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.
ಪ್ರತಿಭಟನಾ ನಿರತ ಕಬ್ಬು ಬೆಳೆಗಾರರ ಬೇಡಿಕೆಗೆ ಸ್ಪಂದಿಸುವ ಬದ್ಧತೆ ಇದ್ದರೆ, ಕೇಂದ್ರ ಸರ್ಕಾರ ನಿಗದಿ ಮಾಡುವ ಎಫ್‌ಆರ್‌ಪಿ ಹೆಚ್ಚುವರಿಯಾಗಿ ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಟನ್ ಗೆ 500 ರೂಪಾಯಿ ಪ್ರೋತ್ಸಾಹ ಧನ ಘೋಷಣೆ ಮಾಡಿ ಎಂದು ಸವಾಲು ಹಾಕಿದ್ದಾರೆ.

# ಎತ್ತಿನಹೊಳೆ ಯೋಜನೆಗೆ ಕೇಂದ್ರ ಮತ್ತೆ ತಕರಾರು

## 432 ಎಕರೆ ಅರಣ್ಯ ಬಳಸಲು ಕೇಂದ್ರ ಅರಣ್ಯ ಸಚಿವಾಲಯ ನಕಾರ

• ಪ್ರಜೋದಯ ವರದಿ

**ನವದೆಹಲಿ:** ಎತ್ತಿನಹೊಳೆ ಯೋಜನೆಯ ಕಾಮಗಾರಿಗೆ ಹಾಸನ ಹಾಗು ತುಮಕೂರು ಜಿಲ್ಲೆಗಳ 432 ಎಕರೆ ಅರಣ್ಯ ಬಳಸಲು ಕೇಂದ್ರ ಅರಣ್ಯ ಸಚಿವಾಲಯದ ತಜ್ಞರ ಸಮಿತಿ ತಾತ್ವಿಕ ಅನುಮೋದನೆ ನೀಡಲು ಒಪ್ಪಿಲ್ಲ.

ಹಾಸನ, ತುಮಕೂರು ಜಿಲ್ಲೆಗಳಲ್ಲಿ ಗುರುತ್ವಾಕರ್ಷಣೆ ಕಾಲುವೆ ನಿರ್ಮಿಸಲು ತುಮಕೂರಿನ ಬೆಣ್ಣೆ ಹಳ್ಳದ ಕಾವಲ್, ಕಂಚಿಗಾನಹಳ್ಳಿ ಹಾಗು ಬೇಲೂರು ತಾಲ್ಲೂಕಿನ ಐದಹಳ್ಳಿ ಕಾವಲ್, ಕುಮರಿಹಳ್ಳಿ ಗ್ರಾಮದ ಅರಣ್ಯ ಭೂಮಿ ಬಳಸಲು ಒಪ್ಪಿಗೆ ನೀಡುವಂತೆ ಕರ್ನಾಟಕ ಅರಣ್ಯ ಇಲಾಖೆಯು ಅಕ್ಟೋಬರ್ 8ರಂದು ಪ್ರಸ್ತಾವ ಸಲ್ಲಿಸಿತ್ತು. ಪ್ರಸ್ತಾವದ ಪರಾಮರ್ಶೆಗೆ ಕೇಂದ್ರ ಅರಣ್ಯ ಸಲಹಾ ಸಮಿತಿಗೆ ಸಚಿವಾಲಯ ಕಳುಹಿಸಿತ್ತು. ಸಮಿತಿಯು ಯೋಜನೆಯ ಕಾಮಗಾರಿಗೆ ಮತ್ತೆ ತರಕಾರು ಎತ್ತಿದೆ.

ಯೋಜನೆಯ ಕಾಲುವೆ ನಿರ್ಮಾಣಕ್ಕೆ ಅಕ್ರಮವಾಗಿ 107 ಹೆಕ್ಟೇರ್



ಬಳಕೆ ಮಾಡಿರುವುದನ್ನು ಸಚಿವಾಲಯದ ಉನ್ನತ ಅಧಿಕಾರಿಗಳ ಸಮಿತಿ ಪತ್ತೆ ಹಚ್ಚಿ ವರದಿ ಸಲ್ಲಿಸಿದೆ. ಆದರೆ, ರಾಜ್ಯ ಸರ್ಕಾರವು 0.04 ಹೆಕ್ಟೇರ್ ಉಲ್ಲಂಘನೆ ಪ್ರಕರಣದಲ್ಲಷ್ಟೇ ಎಫ್ ಐಆರ್ ದಾಖಲಿಸಿದೆ. ಇದು ಗಂಭೀರ ಲೋಪವೆಂದು ಸಮಿತಿ ಅಭಿಪ್ರಾಯ ಪಟ್ಟಿದೆ.

ಯೋಜನೆ ಅನುಷ್ಠಾನಗೊಳಿಸುತ್ತಿರುವ ವಿಶ್ವೇಶ್ವರಯ್ಯ ಜಲ ನಿಗಮದಿಂದ ಈ ಲೋಪ ಆಗಿದೆಯೇ ಎಂಬ ಬಗ್ಗೆ ರಾಜ್ಯ ಅರಣ್ಯ ಇಲಾಖೆ ಹಾಗೂ ಸಚಿವಾಲಯದ ಪ್ರಾದೇಶಿಕ ಕಚೇರಿ ಜಂಟಿ ವರದಿ ಸಲ್ಲಿಸಬೇಕು. ಪ್ರಾದೇಶಿಕ ಕಚೇರಿಯು ಪ್ರತ್ಯೇಕವಾಗಿ ವರದಿ ಸಲ್ಲಿಸಲು ಅವಕಾಶ ಇದೆ. ಈ ಸಂಬಂಧ ಪ್ರಾದೇಶಿಕ ಕಚೇರಿಯು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಮಿತಿ ನಿರ್ದೇಶನ ನೀಡಿದೆ.

432 ಎಕರೆ ಅರಣ್ಯ ಬಳಕೆಗೆ ಒಪ್ಪಿಗೆ ಕೋರಿ ರಾಜ್ಯ ಸರ್ಕಾರ ಈ ಹಿಂದೆ ಪ್ರಸ್ತಾವ ಸಲ್ಲಿಸಿತ್ತು. ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ವ್ಯಾಪಕ ಪ್ರಮಾಣದಲ್ಲಿ ನಿಯಮ ಉಲ್ಲಂಘನೆ ಆಗಿದೆ ಎಂಬ ಕಾರಣ ನೀಡಿ ಕೇಂದ್ರ ಅರಣ್ಯ ಸಲಹಾ ಸಮಿತಿ ಅನುಮೋದನೆ ಕೊಟ್ಟಿರಲಿಲ್ಲ. ನಿಯಮ ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಹಾಗೂ ದಂಡ ವಿಧಿಸಬೇಕೆಂದು ತಾಕೀತು ಮಾಡಿತ್ತು. ಇದರಿಂದಾಗಿ, ಎತ್ತಿನಹೊಳೆ ಕಾಮಗಾರಿ ಸ್ಥಗಿತವಾಗಿತ್ತು. ಕಂದಾಯ ಭೂಮಿ ಎಂದು ಭಾವಿಸಿ 107 ಹೆಕ್ಟೇರ್ ಬಳಸಲಾಗಿತ್ತು. ಇದು ಉದ್ದೇಶಪೂರ್ವಕ ಉಲ್ಲಂಘನೆ ಅಲ್ಲ. ಈ ಲೋಪವನ್ನು ಮನ್ನಿಸಿ ಕಾಮಗಾರಿ ನಡೆಸಲು ಒಪ್ಪಿಗೆ ನೀಡಬೇಕೆಂದು ರಾಜ್ಯ ಸರ್ಕಾರ ಕೋರಿತ್ತು.

# ಕಾಂಗ್ರೆಸ್ ಬಲಪಡಿಸುವ ಕೆಲಸ ಆಗಲಿ: ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ



• ಪ್ರಜೋದಯ ವರದಿ

**ಹಾಸನ:** ರಾಜ್ಯದಲ್ಲಿ ನಮ್ಮದೇ ಸರ್ಕಾರ ಇರುವುದರಿಂದ ಸಂಘಟನೆ ಬಲಪಡಿಸಿ ಮುಂಬರುವ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲ್ಲುವಂತೆ ಕೆಲಸ ಮಾಡಬೇಕೆಂದು ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಅವರು ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಕಾನೂನು ವಿಭಾಗದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ಕಾನೂನು ವಿಭಾಗದ ಪದಾಧಿಕಾರಿಗಳು ಹೆಚ್ಚು ವಕೀಲರನ್ನು ಪಕ್ಷ ದತ್ತ ಸೆಳೆಯಬೇಕು. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಸರ್ಕಾರದ ಕಲ್ಯಾಣ ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸವಾಗಬೇಕೆಂದು ಕಿವಿಮಾತು ಹೇಳಿದರು.

ಕೆಪಿಸಿಸಿ ಕಾನೂನು ವಿಭಾಗದ ಕಾರ್ಯಾಧ್ಯಕ್ಷ ಶ್ರೀನಿವಾಸ್ ಬಾಬು ಅವರು ಮಾತನಾಡಿ, ಸಂವಿಧಾನದ ಮೌಲ್ಯ ಮತ್ತು ಪ್ರಜಾಪ್ರಭುತ್ವದ ತತ್ವಗಳನ್ನು ವಕೀಲರು ತಮ್ಮ ಕೆಲಸದ ಮೂಲಕ ಕಾಪಾಡಬೇಕೆಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಇ.ಹೆಚ್.ಲಕ್ಷ್ಮಣ್ ಅವರು ಮಾತನಾಡಿ, ಕಾನೂನು ವಿಭಾಗವು ಕಾನೂನು, ಮಾನವ ಹಕ್ಕು ಹಾಗು ಮಾಹಿತಿ ಹಕ್ಕು ಒಳಗೊಂಡಿದೆ. ಈ ಘಟಕದ ಕಾರ್ಯಕರ್ತರು ಎಚ್ಚರಿಕೆಯಿಂದ ಮತ್ತು ನಿಷ್ಠೆಯಿಂದ ಕೆಲಸ ಮಾಡಬೇಕೆಂದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಲೋಕೇಶ್ ಅವರು ಮಾತನಾಡಿ, ಎಲ್ಲರೂ ಕಾನೂನು ಅರಿವು ಹೊಂದುವ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಪಣ ತೊಡಬೇಕು. ಜಿಲ್ಲೆಯಲ್ಲಿ ಕಾನೂನು ವಿಭಾಗದ ಸಂಘಟನೆಯನ್ನು ಬಲಪಡಿಸಿ, ವಕೀಲರಿಗೆ ರಾಜಕೀಯ ಜಾಗೃತಿ ಮೂಡಿಸುವ ಕೆಲಸವಾಗಬೇಕಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಶಕ್ತಿ ಬಲಪಡಿಸುವ ನಿಟ್ಟಿನಲ್ಲಿ ಎಲ್ಲರೂ ಶಕ್ತಿ ಮೀರಿ ಕೆಲಸ ಮಾಡಬೇಕಿದೆ. ಸಂವಿಧಾನ ರಕ್ಷಣೆ ಯುವಕರ ಕೈಯಲ್ಲಿದೆ ಎಂದರು. ಕೆಪಿಸಿಸಿ ರಾಜ್ಯ ಜಂಟಿ ಕಾರ್ಯದರ್ಶಿ ಖಲಂದರ್ ಕೊಯ್ಲ್, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ದೇವರಾಜೇಗೌಡ, ಸುಳ್ಯ ಕ್ಷೇತ್ರದ ಮುಖಂಡ ಜಿಗಣಿ ಕೃಷ್ಣಪ್ಪ, ಎಸ್.ಸಿ. ಘಟಕದ ಮಾಜಿ ಅಧ್ಯಕ್ಷ ಡಾ. ಮುನಿಸ್ವಾಮಿ ಇತರರಿದ್ದರು.

### ನೂತನ ಪದಾಧಿಕಾರಿಗಳು

ಜಿಲ್ಲಾ ಕಾಂಗ್ರೆಸ್ ಕಾನೂನು ವಿಭಾಗದ ಅಧ್ಯಕ್ಷರಾಗಿ ನಾಯಕರಹಳ್ಳಿ ಜಯರಾಮ್, ಉಪಾಧ್ಯಕ್ಷರಾಗಿ ವಿಜಯಕುಮಾರ್, ಎಂ.ಡಿ.ಮಂಜು, ಕೆ.ಎಸ್.ಹರೀಶ್, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಪ್ರಸನ್ನ, ಖಜಾಂಚಿಯಾಗಿ ಮೊಹಮ್ಮದ್ ಆರಿಫ್, ಜಂಟಿ ಕಾರ್ಯದರ್ಶಿಗಳಾಗಿ ಇಮ್ರಾನ್ ಪಾಷಾ, ಲಕ್ಷ್ಮಣ, ಯೋಗೇಶ್ ಗೌರವ್ ಮತ್ತು ಮೋಹನ್ ಕುಮಾರ್ ಅಧಿಕಾರ ಸ್ವೀಕರಿಸಿದರು.

# ಪಂಜಾಬ್ ಹೈಬ್ರಿಡ್ ಹಸು ಆಸೆ ತೋರಿಸಿ ರೈತರಿಗೆ ದೋಖ

- ನಿಸರ್ಗ ಡೇರಿ ಫಾರ್ಮ್ ವಿರುದ್ಧ ಕ್ರಮಕ್ಕೆ ವಂಚನೆಗೊಳಗಾದ ಹೈನುಗಾರರ ಆಗ್ರಹ
- ತನಿಖೆಗೆ ಮುಂದಾದ ಪಂಶುಸಂಗೋಪನಾ ಇಲಾಖೆ, ನೋಟೀಸ್ ಜಾರಿ

• ಪ್ರಜೋದಯ ವರದಿ

**ಹಾಸನ:** ರೈತರ ಪ್ರಮುಖ ಉಪ ಕಸು ಬನ್ನು ಹೈನುಗಾರಿಕೆಯನ್ನೇ ಬಂಡ ವಾಳವನ್ನಾಗಿ ಮಾಡಿಕೊಂಡ ನಿಸರ್ಗ ಡೇರಿ ಫಾರ್ಮ್ ಎಂಬ ಖಾಸಗಿ ಸಂಸ್ಥೆ ಜಿಲ್ಲೆ ಮಾತ್ರವಲ್ಲದೇ ರಾಜ್ಯದ ವಿವಿ ಧೆಡೆ ರೈತರಿಗೆ ಮಾರಾಟ ಮಾಡಿರುವ ಬಹುತೇಕ ಹಸುಗಳು ರೋಗಕ್ಕೆ ತುತ್ತಾಗಿವೆ. ಇನ್ನೂ ಹಲವು ಹಸುಗಳು ಸಾವನ್ನಪ್ಪಿರುವುದರಿಂದ ಕೃಷಿಕರು ಸಾಲದ ಸುಳಿಗೆ ಸಿಲುಕಿದ್ದಾರೆ.

ಶಿವಮೊಗ್ಗಾ ಮತ್ತು ಹಾಸನ ಜಿಲ್ಲೆಯಲ್ಲಿರುವ ನಿಸರ್ಗ ಡೇರಿ ಫಾರ್ಮ್ ಎಂಬ ಸಂಸ್ಥೆ ದೂರದ ಪಂಜಾಬ್ ರಾಜ್ಯದಿಂದ ಅತೀ ಹೆಚ್ಚು ಹಾಲು ನೀಡುವ ಜರ್ಸಿ, ಸಿಂದಿ ತಳಿಯ ಹಸು ಗಳನ್ನು ತರಿಸಿಕೊಡುವುದಾಗಿ ರೈತರನ್ನು ನಂಬಿಸಿ, ಒಂದು ಹಸುವಿಗೆ ಒಂದ ರಿಂದ ಒಂದೂವರೆ ಲಕ್ಷ ರೂ. ವರೆಗೆ ಹಣ ಪಡೆದು, ಹಸುಗಳನ್ನು ಸಾಗಣೆ ಮಾಡುವ ವೇಳೆ ಸರಿಯಾದ ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದರಿಂದ ಹಸುಗಳನ್ನು ಸಾಗಿಸುವ ವೇಳೆ ಕರುಗಳು ಹೊಟ್ಟೆಯಲ್ಲೇ ಸಾವನ್ನಪ್ಪಿವೆ. ಆ ಹಸುಗಳು ಕೂಡ ಬದುಕ ಲಾರದ ಸ್ಥಿತಿಗೆ ತಲುಪಿವೆ. ಇನ್ನು ಕೆಲ ಹಸುಗಳು ತೀವ್ರ ಅನಾರೋಗ್ಯಕ್ಕೆ ತುತ್ತಾಗಿವೆ. ಕಷ್ಟಪಟ್ಟು ಉಳಿಸಿಕೊಂಡರೂ ನಿರೀಕ್ಷೆಯಷ್ಟು ಹಾಲು ನೀಡುತ್ತಿಲ್ಲ.

ಈ ತೊಂದರೆ ಅನುಭಸಿದ ರೈತರು ನಿಸರ್ಗ ಡೇರಿ ಫಾರ್ಮ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆ ಮತ್ತು ಸರ್ಕಾರಕ್ಕೆ ದೂರು ನೀಡಿದ್ದಾರೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಜಂಟಿ ನಿರ್ದೇಶಕರ ಸಮ್ಮುಖದಲ್ಲಿ ಸಂತ್ರಸ್ತ ರೈತರಿಂದ ಮಾಹಿತಿ ಪಡೆದು, ಪರಿಶೀಲನೆ ನಡೆಸಲು ಮುಂದಾಗಿದೆ. ಅಲ್ಲದೇ ಹಸುಗಳನ್ನು ನೀಡಿದ ನಿಸರ್ಗ ಡೇರಿ ಫಾರ್ಮ್ ಮಾಲೀಕ ನಯಾಜ್ ಅಹಮದ್‌ಗೆ ನೋಟೀಸ್ ಸಹ ಜಾರಿ ಮಾಡಿದೆ.





**ಸಾಗಣೆ ವೇಳೆಯೇ ಕರುಗಳ ಸಾವು**

ಹೈನುಗಾರಿಕೆಯಲ್ಲಿ ಕ್ರಾಂತಿಕಾರಿ ಬದಲಾವಣೆ ಸಾಧಿಸಿರುವ ಪಂಜಾಬ್ ರಾಜ್ಯದ ಉತ್ತಮ ದರ್ಜೆಯ, ಅತೀ ಹೆಚ್ಚು ಹಾಲು ನೀಡುವುದರಿಂದ ಆ ಹಸುಗಳನ್ನು ಕರ್ನಾಟಕಕ್ಕೆ ನಾವೇ ಟ್ರಕ್ ಮೂಲಕ ಸುರಕ್ಷಿತವಾಗಿ ತರಿಸಿಕೊಡುತ್ತೇವೆಂದು ರೈತರನ್ನು ನಂಬಿಸಿ, ಹಣ ಪಡೆದುಕೊಳ್ಳುವ ಖಾಸಗಿ ಫಾರ್ಮ್‌ಗಳ ಮಧ್ಯವರ್ತಿಗಳು, ಹೊರ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಹಸುಗಳನ್ನು ತರಿಸಿಕೊಳ್ಳುವ ಸಂದರ್ಭದಲ್ಲಿ ಹಸುಗಳ ವೈದ್ಯಕೀಯ ಪ್ರಮಾಣ ಪತ್ರ ಪಡೆಯದೆ ಗರ್ಭ ಧರಿಸಿದ ಹಸುಗಳನ್ನು ನಿಯಮ ಬಾಹಿರವಾಗಿ ಎರಡರಿಂದ ಎರಡೂವರೆ ಸಾವಿರ ಕಿಲೋ ಮೀಟರ್ ದೂರ ದಿಂದ ಸಾಗಣೆ ಮಾಡುವ ಸಂದರ್ಭ ದಲ್ಲಿ ಸರಿಯಾದ ಮೇವು, ವಿಶ್ರಾಂತಿ ನೀಡದೆ ಬೇಜವಾಬ್ದಾರಿಯಾಗಿ ಸಾಗಾಟ ಮಾಡುವ ವೇಳೆಯೇ ಹೊಟ್ಟೆ ಯಲ್ಲೇ ಕರುಗಳು ಸಾವನ್ನಪ್ಪಿರುತ್ತವೆ. ಅಂತಹ ಹಸುಗಳನ್ನೇ ಇಲ್ಲಿನ ರೈತರಿಗೆ ಮಾರಾಟ ಮಾಡಲಾಗುತ್ತಿದೆ.

ರೈತರು ಬ್ಯಾಂಕ್ ಮತ್ತು ಇತರೆಡೆ ಗಳಿಂದ ಲಕ್ಷ ಲಕ್ಷ ಸಾಲ ಮಾಡಿ ಖರೀದಿ ಮಾಡಿದ್ದ ಆ ಹಸುಗಳ ಆರೋಗ್ಯದಲ್ಲಿ ಏರುಪೇರಾಗಿ ಕೆಲ ದಿನಗಳಲ್ಲೇ ಸಾವನ್ನಪ್ಪಿರುವುದರಿಂದ ರೈತರು ಸಾಲದ ಸುಳಿಗೆ ಸಿಲುಕಿ ಹೈನುಗಾರಿಕೆಗೆ ಕೈ ಹಾಕಿ ಕೈ ಸುಟ್ಟುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬದುಕಿಳಿದ ಹಸುಗಳು ಅನಾರೋಗ್ಯಕ್ಕೆ ತುತ್ತಾಗುತ್ತಿವೆ. ಅವುಗಳ ಪಾಲನೆ-ಪೋಷಣೆಗೆ ಮತ್ತೆ ಸಾವಿರ ರೂ. ವೆಚ್ಚ ಮಾಡಬೇಕಾಗಿದೆ. ಪೋಷಣೆ ಮಾಡಿದರೂ ನಿರೀಕ್ಷಿತ ಪ್ರಮಾಣದಿಂದ ಹಾಲು ನೀಡದೆ ಇರುವುದರಿಂದ ಕಂಗೆಟ್ಟಿರುವ ರೈತರು ಪರಿಹಾರ ನೀಡುವಂತೆ ಹಾಗು ನಿಸರ್ಗ ಡೇರಿ ಫಾರ್ಮ್ ಸೇರಿ ಇದೇ ರೀತಿ ರೈತರಿಗೆ ವಂಚನೆ ಮಾಡುತ್ತಿರುವ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಶು ಸಂಗೋಪನಾ ಸಚಿವರು, ಸರ್ಕಾರಕ್ಕೆ ಪತ್ರ ಬರೆದು ಪ್ರತಿಭಟನೆಗೆ ಮುಂದಾಗಿದ್ದಾರೆ.

> "ನಿಸರ್ಗ ಡೇರಿ ಫಾರ್ಮ್‌ನವರು ಪಂಜಾಬ್ ರಾಜ್ಯದಿಂದ ತರಿಸಿಕೊಟ್ಟಿದ್ದ ಹಸುಗಳು ಕಂದು ಕರು ಹಾಕಿ ಸಾವನ್ನಪ್ಪಿವೆ. ಇನ್ನು ಕೆಲವು ತೀವ್ರ ಅನಾರೋಗ್ಯಕ್ಕೆ ತುತ್ತಾಗಿವೆ. ಹಸುಗಳ ಸಾಗಣೆ ವೇಳೆ ಸರಿಯಾಗಿ ನೋಡಿಕೊಳ್ಳದೆ ಇದ್ದರಿಂದ ಹೀಗಾಗಿವೆ. ಕೆಲವು ಇಲ್ಲಿನ ಪರಿಸರಕ್ಕೆ ಹೊಂದಿಕೊಳ್ಳುತ್ತಿಲ್ಲ. ಹೀಗಾಗಿ ನಾನು ಸೇರಿ ಹಲವು ರೈತರು ನಷ್ಟಕ್ಕೆ ತುತ್ತಾಗಿದ್ದೇವೆ. ಈ ಬಗ್ಗೆ ಪಂಶು ಸಂಗೋಪನಾ ಇಲಾಖೆಗೆ ದೂರು ನೀಡಿದ್ದು, ಈ ಬಗ್ಗೆ ವಿಚಾರಣೆ ಕೂಡ ನಡೆಸಲಾಗಿದೆ. ಆದ್ದರಿಂದ ನಷ್ಟಕ್ಕೆ ತುತ್ತಾಗಿರುವ ರೈತರಿಗೆ ಸರ್ಕಾರವೇ ಪರಿಹಾರ ದೊರಕಿಸಿಕೊಡಬೇಕು.
> -ವಿ.ರಮೇಶ್, ಬೂವನಹಳ್ಳಿ ಸಂತ್ರಸ್ತ ರೈತ

### ಗಮನ ಹರಿಸದ ಸರ್ಕಾರ

ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆಯಿಂದ ಗರ್ಭಧರಿಸಿದ ಹಸುಗಳ ಸಾಗಣೆ ಮಾಡುವುದನ್ನು ನಿಷೇಧ ಮಾಡಿ ರುವ ವಿಷಯನ್ನು ಸರ್ಕಾರ ರೈತರಿಗೆ ಸರಿ ಯಾದ ರೀತಿಯಲ್ಲಿ ಮಾಹಿತಿ ನೀಡಿ, ಜಾಗೃತಿ ಮೂಡಿಸುವ ಕೆಲಸ ಇದುವರೆಗೂ ನಡೆಯದಿರುವುದಿಂದ ಹೈನುಗಾರರು ನಷ್ಟಕ್ಕೆ ಒಳಗಾಗುತ್ತಿದ್ದಾರೆಂದು ಮೋಸ ಹೋದ ರೈತರು ಸರ್ಕಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರೈತರಿಗೆ ನಷ್ಟವುಂಟು ಮಾಡಿರುವ ನಿಸರ್ಗ ಡೇರಿ ಫಾರ್ಮ್ ನಿಷೇಧಿಸಬೇಕು. ಈ ಸಂಸ್ಥೆಯಿಂದ ಖರೀದಿಸಿ ಹಸುಗಳು ಸಾವನ್ನಪ್ಪಿರುವುದರಿಂದ ಸೂಕ್ತ ಪರಿಹಾರನ್ನು ಸರ್ಕಾರವೇ ಕೊಡಿಸಬೇಕೆಂದು ಒತ್ತಾಯಿಸಿದ್ದಾರೆ.

# ಕಾರು ಡಿಕ್ಕಿ : ಮಹಿಳೆ ಸಾವು

• ಪ್ರಜೋದಯ ವರದಿ

ಅರಸೀಕೆರೆ: ರಸ್ತೆ ದಾಟುತ್ತಿದ್ದಾಗ ಕಾರು ಡಿಕ್ಕಿಯಾಗಿ ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಗಂಡಸಿ ಹ್ಯಾಂಡ್ ಪೋಸ್ಟ್‌ನಲ್ಲಿ ನಡೆದಿದೆ.

ಗಂಡಸಿ ಗ್ರಾಮದ ಷಹಿನಾಬಿ (50) ಸಾವನ್ನಪ್ಪಿದ್ದಾರೆ. ಅನಾರೋಗ್ಯದ ಹಿನ್ನಲೆಯಲ್ಲಿ ಆಸ್ಪತ್ರೆಗೆ ತೋರಿಸಲು ಹಾಸನಕ್ಕೆ ಬಂದಿದ್ದ ಅವರು ಊರಿಗೆ ವಾಪಾಸ್ ಹೋಗುತ್ತಿದ್ದಾಗ ಘಟನೆ ನಡೆದಿದೆ. ತಮ್ಮ ಊರಿನ ಬಸ್ ಹತ್ತಲು ಗಂಡಸಿ ಹ್ಯಾಂಡ್‌ಪೋಸ್ಟ್‌ನಲ್ಲಿ ನಡೆದುಕೊಂಡು ಬರುತ್ತಿದ್ದಾಗ ಚನ್ನರಾಯಪಟ್ಟಣ ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕೃಷಿಯಲ್ಲಿ ಆಧುನಿಕ ತಾಂತ್ರಿಕತೆ ಅಳವಡಿಸಿಕೊಳ್ಳಿ

## ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಎಂ.ಸಿ.ರಂಗಸ್ವಾಮಿ ಸಲಹೆ

• ಪ್ರಜೋದಯ ವರದಿ

**ಹಾಸನ:** ಕೃಷಿಯಲ್ಲಿ ಆಧುನಿಕ ತಾಂತ್ರಿಕತೆ ಅಳವಡಿಸಿಕೊಂಡು, ಆಧುನಿಕ ಪದ್ಧತಿಯಲ್ಲಿ ಕೃಷಿ ಮಾಡಿದರೆ ಸಾಧನೆ ಮಾಡಬಹುದೆಂದು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಪ್ರಗತಿಪರ ಕೃಷಿಕ ಡಾ.ಎಂ.ಸಿ.ರಂಗಸ್ವಾಮಿ ಅವರು ಹೇಳಿದರು.

ನಗರದ ಕೃಷಿ ಇಲಾಖೆ ಸಭಾಂಗಣದಲ್ಲಿ ಗುರುವಾರ ಕೃಷಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕೃಷಿಯಲ್ಲಿ ಸಾಕಷ್ಟು ಏಳು ಬೀಳುಗಳನ್ನು ನೋಡಿದ್ದೇನೆ. (ನಾಲ್ಕನೇ ಪುಟದಲ್ಲಿ)



# ಕಬ್ಬಳಿ ಶ್ರೀ ಬಸವೇಶ್ವರ ಸ್ವಾಮಿ ಜಾತ್ರೆ ಸಂಪನ್ನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಕಬ್ಬಳಿ ಶ್ರೀ ಬಸವೇಶ್ವರ ಸ್ವಾಮಿ ಜಾತ್ರೆ ಧಾರ್ಮಿಕ ಕೈಂಕರ್ಯಗಳೊಂದಿಗೆ ಸಂಪನ್ನಗೊಂಡಿತು.

ಉತ್ಸವ ಮೂರ್ತಿಗೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಪೂಜೆ ಸಲ್ಲಿಸಿ ಮೂಲ ಸ್ಥಾನದಿಂದ ಗ್ರಾಮಕ್ಕೆ ಕಳಿಸಿಕೊಡುವ ಮೂಲಕ ಜಾತ್ರೆಗೆ ವಿಧ್ಯುಕ್ತ ತೆರೆ ಎಳೆದರು. ಬೆಳಿಗ್ಗೆಯಿಂದ ಸಂಜೆವರೆಗೆ ಬಸವೇಶ್ವರಸ್ವಾಮಿಯ ಮೂಲ ಮೂರ್ತಿಗೆ ವಿಶೇಷ

» ನಾಲ್ಕನೇ ಪುಟದಲ್ಲಿ

# ನ.17 ರಂದು ದಿಶಾ ಸಭೆ

• ಪ್ರಜೋದಯ ವರದಿ

**ಹಾಸನ :** ಸಂಸದ ಶ್ರೇಯಸ್ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ನ.17 ರಂದು ಬೆ.11 ಗಂಟೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನಾ (ದಿಶಾ) ಸಭೆಯನ್ನು ಏರ್ಪಡಿಸಲಾಗಿದೆ ಎಂದು ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

# ನ.10 ರಂದು ಕೆ.ಡಿ.ಪಿ ಸಭೆ

**ಹಾಸನ :** ಬೇಲೂರು ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನ.10 ರಂದು ಬೆ.11 ಗಂಟೆಗೆ ಶಾಸಕ ಹೆಚ್.ಕೆ.ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆ.ಡಿ.ಪಿ) ದ್ವಿತೀಯ ತ್ರೈಮಾಸಿಕ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಬೇಲೂರು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

**ತಪ್ಪದ ಸಾರ್ವಜನಿಕರ ಅಲೆದಾಟ | ಮೂಲಸೌಕರ್ಯಗಳಿಗೂ ಕೊರತೆ**

# ಮಿನಿ ವಿಧಾನಸೌಧ ಕಟ್ಟಡಕ್ಕೆ ಕೂಡಿ ಬಾರದ ಉದ್ಘಾಟನೆ ಭಾಗ್ಯ

• ಪ್ರಜೋದಯ ವರದಿ

**ಸಕಲೇಶಪುರ:** ಕಂದಾಯ ಇಲಾಖೆಯ ವಿವಿಧ ಶಾಖೆಗಳನ್ನು ಒಂದೇ ಸೂರಿನಡಿ ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ನಿರ್ಮಿಸಿದ ಮಿನಿ ವಿಧಾನಸೌಧ ಕಟ್ಟಡ ಉದ್ಘಾಟನೆಗೆ ಮುಹೂರ್ತ ಕೂಡಿ ಬಾರದೆ ಜನರು ನಿತ್ಯ ತೊಂದರೆ ಅನುಭವಿಸುವಂತಾಗಿದೆ.

ಕಟ್ಟಡ ಕಾಮಗಾರಿ ಪೂರ್ಣಗೊಂಡು ವರ್ಷ ಕಳೆದರೂ ಲೋಕಾರ್ಪಣೆಗೆ ಶುಭ ಘಳಿಗೆ ಒದಗಿ ಬರುತ್ತಿಲ್ಲ. 2008ರಲ್ಲಿ ಪಟ್ಟಣದ ಮಧ್ಯ ಭಾಗದಲ್ಲಿ ಒಂದು ಹಂತದ ಮಿನಿ ವಿಧಾನ ಸೌಧದ ಕಟ್ಟಡ ನಿರ್ಮಾಣ ಮಾಡಲಾಗಿತ್ತು.

ಅಲ್ಲಿ ಸ್ಥಳಾವಕಾಶದ ಕೊರತೆ ಎದುರಾದ ಹಿನ್ನಲೆಯಲ್ಲಿ ಹಳೇ ತಾಲ್ಲೂಕು ಕಚೇರಿ ಕಟ್ಟಡದಲ್ಲಿದ್ದ ಸರ್ವೆ ಕಚೇರಿ, ನಾಡ ಕಚೇರಿ, ಉಪ ನೋಂದಣಾಧಿಕಾರಿ ಕಚೇರಿಗಳನ್ನು ಪಟ್ಟಣದ ವಿವಿಧ ಖಾಸಗಿ ಕಟ್ಟಡಗಳಿಗೆ ಸ್ಥಳಾಂತರಿಸಲಾಗಿದೆ. ಅಂದಿನಿಂದ ಇಂದಿನವರೆಗೆ ಸಾರ್ವಜನಿಕರು ಇಲಾಖೆಗಳ ಕೆಲಸಕ್ಕಾಗಿ ಪಟ್ಟಣದಾದ್ಯಂತ ಅಲೆಯುವಂತಾಗಿದೆ.

**2024ರಲ್ಲಿ ಕೆಲಸ ಪೂರ್ಣ**

ಸಕಲೇಶಪುರದ ಜನರಿಗೆ ಆಗುತ್ತಿದ್ದ ತೊಂದರೆಯನ್ನು ಗಂಭೀರವಾಗಿ ಪರಿಗಣಿಸಿದ್ದ ಹೆಚ್.ಡಿ ಕುಮಾರಸ್ವಾಮಿ ಅವರ ಸರ್ಕಾರ ಮಿನಿವಿಧಾನಸೌಧದ ಎರಡನೇ ಹಂತದ ಕಾಮಗಾರಿಗೆ 2018 ರಲ್ಲಿ ಅನುದಾನ ಬಿಡುಗಡೆ ಮಾಡಿತ್ತು. 2021ರಲ್ಲಿ ಆರಂಭವಾದ ಕಟ್ಟಡದ ಕಾಮಗಾರಿ ಕುಂಟುತ್ತಾ 2024ರ ರ ಮಧ್ಯದಲ್ಲಿ ಮುಕ್ತಾಯವಾಗಿದೆ. ಇನ್ನೇನು ಲೋಕಾರ್ಪಣೆಯಾಗಿ ಎಲ್ಲಾ ಕಚೇರಿಗಳು ಒಂದೇ ಕಟ್ಟಡದಲ್ಲಿ ಸಿಗುತ್ತವೆ. ಅಲೆದಾಟ ತಪ್ಪುತ್ತದೆಂದು ಭಾವಿಸಿದ್ದರಾದರೂ ನಿರೀಕ್ಷೆ ಹುಸಿಯಾಗಿದೆ. ಅಂದಿನ ಅಧಿಕಾರಿಗಳು ಸಹ ಇನ್ನು ಕೆಲವೇ ದಿನಗಳಲ್ಲಿ ಕಟ್ಟಡ ಉದ್ಘಾಟನೆಗೊಳ್ಳಲಿದೆ ಎಂಬ ಹೇಳಿಕೆ ನೀಡಿದ್ದರು.

**ಮೂಲಸೌಕರ್ಯಕ್ಕೆ ಪರದಾಟ**

ಅಂಗವಿಕಲರು, ಅಬಲರು, ವೃದ್ಧರು ಸರ್ಕಾರಿ ಕಚೇರಿಗಳಿಗೆ ತಲುಪಲು ಅಗತ್ಯ ಸೌಲಭ್ಯವಿರಬೇಕು. ಶೌಚಾಲಯ,ಅಗತ್ಯ ಗಾಳಿ, ಬೆಳಕು ಇರುವುದು ಅವಶ್ಯ. ಆದರೆ, ಪಟ್ಟಣದ ವಿವಿಧೆಡೆ ಇರುವ ಸರ್ವೆ ಕಚೇರಿ, ಸಬ್ ರಿಜಿಸ್ಟ್ರಾರ್ ಕಚೇರಿ ಹಾಗು ನಾಡ ಕಚೇರಿಗೆ



ಹೋಗುವುದು ಅಸಾಧ್ಯವಾಗಿದೆ. ಜೀವನದ ಸಂಧ್ಯಾ ಕಾಲದಲ್ಲಿ ಆಸ್ತಿ ಹಸ್ತಾಂತರಕ್ಕೆ ವೃದ್ಧರು ಸಬ್ ರಿಜಿಸ್ಟ್ರಾರ್ ಕಚೇರಿಗೆ ಭೇಟಿ ನೀಡುವುದು ಅನಿವಾರ್ಯ. ಮೂರನೇ ಅಂತಸ್ತಿನಲ್ಲಿರುವ ಇಲ್ಲಿನ ಸಬ್ ರಿಜಿಸ್ಟ್ರಾರ್ ಕಚೇರಿಗೆ ವೃದ್ಧರನ್ನು ವ್ಹೀಲ್ ಚೇರ್ ಅಥವಾ ಎತ್ತಿಕೊಂಡು ಹೋಗಬೇಕಾಗಿದೆ.

**ಬೆಂಕಿಯಿಂದ ಬಾಣಲೆಗೆ**

ತಾಲ್ಲೂಕು ಮಿನಿ ವಿಧಾನಸೌಧದಿಂದ 1 ಕಿ.ಮೀ. ದೂರದಲ್ಲಿದ್ದ ನಾಡ ಕಚೇರಿ ಹಲವು ವರ್ಷಗಳಿಂದ ಮಳೆಯಿಂದ ಸೋರುತ್ತಿದ್ದು, ಒಮ್ಮೊಮ್ಮೆ ಗಾಳಿ-ಮಳೆಗೆ ಹೆಂಚುಗಳು ನೆಲಕ್ಕೆ ಬೀಳುವುದು ಸಾಮಾನ್ಯವಾಗಿತ್ತು. ಈ ಅಪಾಯ ಅರಿತ ಅಧಿಕಾರಿಗಳು ಎಪಿಎಂಸಿ ಆವರಣಕ್ಕೆ ನಾಡ ಕಚೇರಿಯನ್ನು ಸ್ಥಳಾಂತರಿಸಿದ್ದಾರೆ. ಎಪಿಎಂಸಿ ಪ್ರಾಂಗಣ ಮಿನಿ ವಿಧಾನಸೌಧದಿಂದ ಸುಮಾರು 2 ಕಿ.ಮೀ. ದೂರದಲ್ಲಿದ್ದು, ಕಡಿದಾದ ಎತ್ತರವನ್ನು ಹೊಂದಿರುವುದರಿಂದ ಆರೋಗ್ಯವಂತರೇ ನಡೆದು ಹೋಗುವುದು ಕಷ್ಟಕರ. ಅಬಲರು, ವೃದ್ಧರು ಕಚೇರಿಗೆ ತಲುಪುವುದು ಇನ್ನೂ ಕಷ್ಟಕರ. ಆದ್ದರಿಂದ ನಾಡ ಕಚೇರಿಯನ್ನು ಮಿನಿ ವಿಧಾನಸೌಧ ಸಮೀಪಕ್ಕೆ ಸ್ಥಳಾಂತರಿಸಿ ಎಂಬ ಆಗ್ರಹ ನಿತ್ಯ ಕೇಳಿಬರುತ್ತಿದೆ.

ಮಿನಿ ವಿಧಾನ ನಿರ್ಮಾಣ ವೇಳೆ ಕಟ್ಟಡದ ನೆಲಮಾಳಿಗೆಯನ್ನು ವಾಹನಗಳ ನಿಲುಗಡೆಗಾಗಿ ಮೀಸಲಿಡಲಾಗಿತ್ತು. ಆದರೆ, ಮೂಲ ಕಟ್ಟಡದಲ್ಲಿ ವಿವಿಧ ಶಾಖೆಗಳಿಗೆ ಸ್ಥಳಾವಕಾಶದ ಕೊರತೆ ಎದುರಾದ ಹಿನ್ನಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ನೆಲಮಾಳಿಗೆಯನ್ನು ಕಚೇರಿಗಳ ಉಪಯೋಗಕ್ಕಾಗಿ ಗೋಡೆಗಳನ್ನು ನಿರ್ಮಿಸಲಾಗಿದೆ. ನೆಲಮಾಳಿಗೆಯಲ್ಲಿರುವ ಹಳೇ ಕಡತಗಳ ಸಂಗ್ರಹಗಾರ, ಆಹಾರ ಶಾಖೆ, ಪಹಣಿ ಕೇಂದ್ರ, ನೆಮ್ಮದಿ ಕೇಂದ್ರ ಸ್ಥಾಪಿಸಲಾಗಿದೆ. ಆದರೆ ಇಲ್ಲಿರುವ ಯಾವ ಶಾಖೆಗಳಿಗೂ ಕನಿಷ್ಟ ಗಾಳಿ ಬೆಳಕಿನ ವ್ಯವಸ್ಥೆ ಇಲ್ಲದಾಗಿದೆ. ವಿದ್ಯುತ್ ಕೈಕೊಟ್ಟರೆ ಶಾಖೆಗಳಲ್ಲಿ ಕತ್ತಲು ಅವರಿಸುವುದರಿಂದ ಕಚೇರಿ ಕೆಲಸವು ಸ್ಥಗಿತ ಎಂಬ ಸ್ಥಿತಿ ನೆಲೆಸಿದೆ.

ಹಳೇ ತಾಲ್ಲೂಕು ಕಚೇರಿಯ ಮರಮುಟ್ಟುಗಳನ್ನು ತಂದು ಮಿನಿವಿಧಾನ ಸೌದದ ನೆಲ ಮಹಡಿಯಲ್ಲಿ ಇಡಲಾಗಿತ್ತು. ಅವುಗಳ ಹರಾಜು ವೇಳೆ ಮಿನಿವಿಧಾನ ಸೌಧದ ಹೊರ ಭಾಗಕ್ಕೆ ಹಾಕಲಾಗಿದೆ. ವಿಫಲ ಹರಾಜು ಪ್ರಕ್ರಿಯೆ ನಡೆದು ಹಲವು ವರ್ಷಗಳು ಕಳೆದಿದ್ದು, ಅಂದು ಹೊರ ಭಾಗಕ್ಕೆ ಹಾಕಿದ ಮರಮುಟ್ಟುಗಳನ್ನು ಕಟ್ಟಡದ ಒಳಭಾಗಕ್ಕೆ ಹಾಕಲು ಅಧಿಕಾರಿಗಳು ತೋರಿದ ಉದಾಸೀನದಿಂದಾಗಿ ಮರಮುಟ್ಟುಗಳು ಅಸ್ತಿತ್ವ ಕಳೆದುಕೊಂಡಿವೆ. ಲಕ್ಷಾಂತರ ರೂ. ಬೆಲೆ ಬಾಳುವ ಈ ಮರಮುಟ್ಟುಗಳು ಈಗ ಅಡುಗೆ ಮಾಡಲು ಉಪಯೋಗಿಸುವುದು ಅಸಾಧ್ಯ ಎಂಬ ಸ್ಥಿತಿಗೆ ತಲುಪಿವೆ. ಸದ್ಯ ಮರಮುಟ್ಟುಗಳು ಹಾಕಿರುವ ಪ್ರದೇಶದಲ್ಲಿ ಜನರು ಸಂಚರಿಸುವುದು ಅಸಾಧ್ಯ ಎಂಬ ಸ್ಥಿತಿ ನಿರ್ಮಾಣವಾಗಿದೆ. ಹಾವು, ಚೇಳುಗಳ ವಾಸ ಸ್ಥಳವಾಗಿದೆ. ಆದರೂ ಅವುಗಳನ್ನು ಬೇರೆಡೆ ಸಾಗಿಸಲು ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆಂದು ಸ್ಥಳೀಯರು ದೂರಿದ್ದಾರೆ.

# ಆಕಸ್ಮಿಕ ಬೆಂಕಿ ಅವಘಡ ತಪ್ಪಿಸುವ ಪ್ರಾತ್ಯಕ್ಷಿಕೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಆಕಸ್ಮಿಕವಾಗಿ ಬೆಂಕಿ ಅವಘಡಗಳು ಸಂಭವಿಸಿದಾಗ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು ಮತ್ತು ನಂದಿಸುವ ಕ್ರಮದ ಬಗ್ಗೆ ಚನ್ನರಾಯಪಟ್ಟಣ ಅಗ್ನಿ ಶಾಮಕ ಠಾಣೆಯ ಸಿಬ್ಬಂದಿ ಗುರುವಾರ ಹಿರೀಸಾವೆಯ ಸಮುದಾಯ ಆರೋಗ್ಯ ಕೇಂದ್ರ ಮತ್ತು ಪಿಎಂಶ್ರೀ ಶಾಸಕರ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

ಕಚೇರಿಯಲ್ಲಿ ಯಂತ್ರೋಪಕರಣಗಳಿಗೆ ಬೆಂಕಿ ಹೊತ್ತಿಕೊಂಡಾಗ ಅಗ್ನಿ ನೊಂದಕಗಳನ್ನು ಬಳಸಿ ಬೆಂಕಿಯನ್ನು ನಂದಿಸುವ ಬಗ್ಗೆ ಮತ್ತು ಮನೆಯಲ್ಲಿ ಎಲ್‌ಪಿಜಿ ಗ್ಯಾಸ್, ವಿದ್ಯುತ್‌ನಿಂದ ಆಕಸ್ಮಿಕ ಬೆಂಕಿ ಉಂಟಾದರೆ ಹೇಗೆ ನಂದಿಸಬಹುದು ಹಾಗೂ ಮನೆಯ ಹೊರಭಾಗದಲ್ಲಿ ಉಂಟಾದ ಬೆಂಕಿ ಅವಘಡಗಳನ್ನು ನಂದಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ

» ನಾಲ್ಕನೇ ಪುಟದಲ್ಲಿ

CMYK CMYK CMYK CMYK

ಪ್ರಜೋದಯ
E-mail : prajodayahsn@gmail.com
07 ನವೆಂಬರ್ 2025 ಶುಕ್ರವಾರ

# ಸಿನಿ ಪ್ರಜಾ

## ಹಿಟ್ ಕೊಟ್ಟೆವು ಎಂದ ಮಾತ್ರಕ್ಕೆ ನಾವೇನೂ ಜ್ಞಾನಿಗಳಲ್ಲ : ರಾಜ್ ಬಿ ಶೆಟ್ಟಿ

ರಾಜ್ ಬಿ ಶೆಟ್ಟಿ ಅವರ ಸು ಫ್ರಂ ಸೋ ಸೂಪರ್ ಹಿಟ್ ಆಗಿದೆ. 8 ವರ್ಷಗಳ ಹಿಂದೆ ಒಂದು ಮೊಟ್ಟೆಯ ಕಥೆ ಮೂಲಕ ಚಿತ್ರರಂಗಕ್ಕೆ ಬಂದ ರಾಜ್ ಬಿ ಶೆಟ್ಟಿ, ಪ್ರಯೋಗಾತ್ಮಕ ಚಿತ್ರಗಳಿಗೇ ಹೆಚ್ಚು ಒಡ್ಡಿಕೊಂಡವರು. ಸೋತಿದ್ದೂ ಇದೆ. ಗೆದ್ದಿದ್ದೂ ಇದೆ. ಇತ್ತೀಚೆಗೆ ಸು ಫ್ರಂ ಸೋ ಹಿಟ್ ಆದ ನಂತರ ರಾಜ್ ಬಿ ಶೆಟ್ಟಿ ಅವರ ಸ್ಟಾರ್ ಡಂ ಬದಲಾಗಿದೆ. ಹೌದಾ.. ಎಂದರೆ.. ರಾಜ್ ಬಿ ಶೆಟ್ಟಿ ಹೇಳೋದು ಹೀಗೆ..

ಸು ಫ್ರಂ ಸೋ ಗೆದ್ದಿದೆ. ಹಾಗಂತ ನಮಗೆ ಎಲ್ಲವೂ ತಿಳಿದಿದೆ. ಒಂದು ಗೆಲುವನ್ನು ತಲೆಗೆ ಹತ್ತಿಸಿಕೊಂಡರೆ ನಮ್ಮ ಪತನ ಆರಂಭವಾದಂತೆಯೇ. ನಾವು ಬೆಳೆಯುವುದನ್ನು ಜೊತೆಗೆ ಕಲಿಯುವುದನ್ನೂ ನಿಲ್ಲಿಸಿಬಿಡ್ತೇವೆ ಎಂದಿದ್ದಾರೆ. ಮುಂದುವರೆದು ಸು ಫ್ರಂ ಸೋ ಚಿತ್ರಕ್ಕೂ ಮೊದಲ ಚಿತ್ರ ಫ್ಲಾಪ್ ಆಗಿತ್ತು. ಬೇರೆ ಏನಾದ್ರೂ ಮಾಡಬೇಕು ಎಂದು ಹೊರಟಾಗ ಮಾಡಿದ ಪ್ರಯೋಗವೇ ಸು ಫ್ರಂ ಸೋ. ನಮ್ಮ ಸಕ್ಸಸ್ಸಿಗೆ ನಾವೇ ಫ್ಯಾನ್ಸ್ ಆಗಬಾರದು ಎನ್ನುತ್ತಾರೆ.

ರಾಜ್ ಬಿ ಶೆಟ್ಟಿ ಸದ್ಯಕ್ಕೆ 45 ಚಿತ್ರದ ಪ್ರಚಾರದಲ್ಲಿ ಬ್ಯುಸಿ ಇದ್ದಾರೆ. ಪ್ರತೀ ಚಿತ್ರದ ಮೇಲೂ ಭರವಸೆ ಇರುತ್ತದೆ. ಪ್ರಯತ್ನ ಪ್ರಾಮಾಣಿಕವಾಗಿರುತ್ತದೆ. ಬೆಸ್ಟ್ ಸಿನಿಮಾಗೆ ಯಾವುದೇ ಫಾರ್ಮುಲಾ ಇಲ್ಲ ಎನ್ನುವ ರಾಜ್ ಬಿ ಶೆಟ್ಟಿ ಅವರ ಪ್ರಕಾರ ಯಾರೇ ಆದರೂ ಮೊದಲು ಕಥೆಗೆ ಶರಣಾಗಬೇಕು ಎನ್ನುತ್ತಾರೆ.



45 ಚಿತ್ರ ರಿಲೀಸ್ ಆಗುವುದಕ್ಕೆ ರೆಡಿ ಇದೆ. ರಾಜ್ ಬಿ ಶೆಟ್ಟಿ ಶಿವಣ್ಣ ಮತ್ತು ಉಪೇಂದ್ರ, ಜೊತೆ ನಟಿಸಿರುವ, ಅರ್ಜುನ್ ಜನ್ಯ ನಿರ್ದೇಶನದ ಚಿತ್ರವಿದು. ಇದರ ಜೊತೆಗೆ ಕೆಪಿ ಪೂರ್ಣಚಂದ್ರ, ತೇಜಸ್ವಿ ಅವರ ಜುಗಾರಿ ಕ್ರಾಸ್ ಕಾದಂಬರಿ ಗುರುದತ್ ಗಾಣಿಗ ಅವರ ನಿರ್ದೇಶನದಲ್ಲಿ ಸಿನಿಮಾ ಆಗುತ್ತಿದೆ.

ರಾಜ್ ಬಿ ಶೆಟ್ಟಿ ಹೀರೋ. ಕರಾವಳಿ ಚಿತ್ರದ ಚಿತ್ರೀಕರಣ ಆಗಿದೆ. ಪ್ರಜ್ವಲ್ ದೇವರಾಜ್ ಜೊತೆ ರಾಜ್ ಬಿ ಶೆಟ್ಟಿ ಸ್ಕ್ರೀನ್ ಶೇರ್ ಮಾಡಿದ್ದಾರೆ. ಎಂದಿನಂತೆ ಹೊಸ ಹೊಸ ಕಥೆಗಳನ್ನು ಹೊಸೆಯುವ ಕೆಲಸ ಜಾರಿಯಲ್ಲಿದೆ.

## 07-11-2025 ದಿನ ಭವಿಷ್ಯ

**ಮೇಷ:** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಸಮಯ ಮತ್ತು ಹಣದ ಕಾತರ ನೀವು ಮಾಡಬೇಕು ಇಲ್ಲದಿದ್ದರೆ ಮುಂಬರುವ ಸಮಯ ತೊಂದರೆಗಳಿಂದ ತುಂಬಿರಬಹುದು. ವ್ಯಾಪಾರಿಗಳು ಸಾಧ್ಯವಾದಷ್ಟು ನಿಮ್ಮ ವ್ಯವಹಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.

**ವೃಷಭ:** ಹತಾಶೆಯ ಭಾವನೆ ನಿಮ್ಮನ್ನುಅವರಿಸಲು ಬಿಡಬೇಡಿ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು. ಪ್ರೀತಿ ಸಾಂಗತ್ಯ ಮತ್ತು ಬಂಧ ಏರಿಕೆಯಲ್ಲಿರುತ್ತವೆ.

**ಮಿಥುನ:** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಸರಿಯಾದ ಸಂಭಾಷಣೆ ಮತ್ತು ಸಹಕಾರ ಸಂಗಾತಿಯ ಜೊತೆಗಿನ ಸಂಬಂಧವನ್ನು ಉತ್ತಮಗೊಳಿಸುತ್ತದೆ. ಪ್ರಣಯ ನಿಮ್ಮ ಹೃದಯವನ್ನು ಆಳುತ್ತದೆ. ಹಿರಿಯರಿಂದ ಬೆಂಬಲ ಮತ್ತು ಮೆಚ್ಚುಗೆ ನಿಮ್ಮ ಸ್ಥೈರ್ಯ ಮತ್ತು ವಿಶ್ವಾಸವನ್ನು ಹೆಚ್ಚಿಸುತ್ತದೆ.

**ಕರ್ಕಾಟಕ:** ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ಫಿಟ್ ಆಗಿ ಉಳಿಯಲು ನಿಯಮಿತವಾಗಿ ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ಇಂದು ನೀವು ಭೂಮಿ, ವಸತಿ, ಅಥವಾ ಸಾಂಸ್ಕೃತಿಕ ಯೋಜನೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಗಮನ ನೀಡಬೇಕು. ಮನೆಯ ಕೆಲಸ ನಿಮ್ಮನ್ನು ಯಾವಾಗಲೂ ವ್ಯಸ್ತವಾಗಿರಿಸುತ್ತದೆ. ನೀವು ಮತ್ತು ನಿಮ್ಮ ಸಂಗಾತಿ ಒಟ್ಟಾಗಿ ಪ್ರೇಮಭರಿತ ದಿನವನ್ನು ಕಳೆಯುತ್ತೀರಿ.

**ಸಿಂಹ:** ಅನಂತ ಜೀವನದ ಉತ್ಕೃಷ್ಟ ವೈಭವವನ್ನು ಆನಂದಿಸಲು ನಿಮ್ಮ ಜೀವನವನ್ನು ಹೆಚ್ಚು ಭವ್ಯಗೊಳಿಸಿ. ಚಿಂತೆಯ ಅನುಪಸ್ಥಿತಿ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆ. ಯಾವುದೇ ಅಪರಿಚಿತ ವ್ಯಕ್ತಿಯ ಸಲಹೆಯಿಂದ ಎಲ್ಲಾದರೂ ಹೂಡಿಕೆ ಮಾಡಿರುವ ಜನರಿಗೆ, ಇಂದು ಆ ಹೂಡಿಕೆಯಿಂದ ಪ್ರಯೋಜನವನ್ನು ಪಡೆಯುವ ಪೂರ್ತಿಸಾಧ್ಯತೆ ಇದೆ.

**ಕನ್ಯಾ:** ಒಬ್ಬ ಆಧ್ಯಾತ್ಮಿಕ ವ್ಯಕ್ತಿ ಆಶೀರ್ವಾದ ಮಾಡುತ್ತಾರೆ ಮತ್ತು ಮನಸ್ಸಿನ ಶಾಂತಿ ತರುತ್ತಾರೆ. ಮನೆಯ ಅಗತ್ಯಗಳನ್ನು ನೋಡುತ್ತಾ, ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಯಾವುದೇ ಅಮೂಲ್ಯ ವಸ್ತುವನ್ನು ಖರೀದಿಸಬಹುದು, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು. ಕುಟುಂಬದ ಸದಸ್ಯರ ಉತ್ತಮ ಸಲಹೆ ಇಂದು ನಿಮಗೆ ಲಾಭ ತರುತ್ತದೆ.

**ತುಲಾ:** ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ಇಂದಿನ ದಿನ, ನಿಮ್ಮ ಬಳಿ ಸಾಲವನ್ನು ಕೇಳುವ ಮತ್ತು ಅದನ್ನು ಹಿಂತಿರುಗಿಸದೆ ಇರುವಂತಹ ಸ್ನೇಹಿತರಿಂದ ನೀವು ನಿಮ್ಮನ್ನು ತಪ್ಪಿಸುವ ಅಗತ್ಯವಿದೆ.

**ವೃಶ್ಚಿಕ:** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ- ಅಥವಾ ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ. ಕುಟುಂಬದಲ್ಲಿ ನಿಮ್ಮ ಸರ್ವಾಧಿಕಾರಿ ಧೋರಣೆಯನ್ನು ಬದಲಾಯಿಸಿಕೊಳ್ಳಲು ಇದು ಒಳ್ಳೆಯ ಸಮಯ. ಜೀವನದ ಏಳುಬೀಳುಗಳನ್ನು ಹಂಚಿಕೊಳ್ಳಲು ಅವರ ಸಹಕಾರದೊಂದಿಗೆ ಕೆಲಸ ಮಾಡಿ.

**ಧನು:** ತಂದೆಯು ನಿಮ್ಮನ್ನು ಆಸ್ತಿಯ ಉತ್ತರಾಧಿಕಾರಿತ್ವದಿಂದ ತಪ್ಪಿಸಬಹುದು. ಆದರೆ ಧೃತಿಗೆಡಬೇಡಿ. ಅಭ್ಯುದಯ ಮನಸ್ಸಿಗೆ ಮುದ ನೀಡಿದರೆ ಅಭಾವ ಅದನ್ನು ಬಲಗೊಳಿಸುತ್ತದೆಂದು ನೆನಪಿಡಿ. ನಿಮಗೆ ಆಕರ್ಷಕವಾಗಿ ತೋರುವ ಯಾವುದೇ ಹೂಡಿಕೆಯ ಯೋಜನೆಯ ಬಗ್ಗೆ ಹೆಚ್ಚು ಕಂಡುಹಿಡಿಯಲು ಮೇಲ್ಮೈಗಿಂತ ಕೆಳಗೆ ಆಳವಾಗಿ ಕೆದಕಿ.

**ಮಕರ:** ನಿಮ್ಮನ್ನು ನೀವೇ ನೋಡಿಕೊಳ್ಳುವ ಬಯಕೆಗೆ ಇತರರ ಅಗತ್ಯಗಳು ಕಡಿವಾಣ ಹಾಕುತ್ತವೆ. ನಿಮ್ಮ ಭಾವನೆಗಳನ್ನು ತಡೆಹಿಡಿಯಬೇಡಿ ಹಾಗೂ ವಿಶ್ರಾಂತಿ ಪಡೆಯುವ ಸಲುವಾಗಿ ನೀವು ಇಷ್ಟಪಡುವುದನ್ನೇನಾದರೂ ಮಾಡಿ. ಭೂಮಿಯನ್ನು ಖರೀದಿಸಿದ ಮತ್ತು ಈಗ ಅದನ್ನು ಮಾರಾಟ ಮಾಡಲು ಬಯಸುವ ಜನರು ಇಂದು ಉತ್ತಮ ಖರೀದಿದಾರರನ್ನು ಕಾಣಬಹುದು.

**ಕುಂಭ:** ನಿಮ್ಮ ಜಗಳಗಂಟ ನಡುವಳಿಕೆ ನಿಮ್ಮ ಶತ್ರುಗಳ ಪಟ್ಟಿಯನ್ನು ಸುಧೀರ್ಘಗೊಳಿಸುತ್ತದೆ. ನೀವು ನಂತರ ಪಶ್ಚಾತ್ತಾಪಪಡುವಷ್ಟು ಕೆಟ್ಟದಾಗಿ ನೀವೇನಾದರೂ ಮಾಡುವಷ್ಟು ನೀವು ಕೋಪಗೊಳ್ಳುವಂತೆ ಮಾಡಲು ಯಾರಿಗೂ ಅವಕಾಶ ನೀಡಬೇಡಿ. ನೀವು ನಿಮ್ಮ ತಂತ್ರಗಳನ್ನು ಅಳವಡಿಸಿದಲ್ಲಿ ಇಂದು ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುತ್ತೀರಿ.

**ಮೀನ:** ಕೆಲವರು ನಿಮಗೆ ಏನನ್ನಾದರೂ ಕಲಿಯಲು ಬಹಳ ವಯಸ್ಸಾಗಿದೆಯೆಂದು ಭಾವಿಸಬಹುದು ಆದರೆ ಅದು ನಿಜವಲ್ಲ - ನಿಮ್ಮ ಪ್ರಖರ ಮತ್ತು ಸಕ್ರಿಯ ಮನಸ್ಸಿನಿಂದ ನೀವು ಹೊಸ ವಿಷಯಗಳನ್ನು ಸುಲಭವಾಗಿ ಕಲಿಯುವಿರಿ. ಇಂದು ನಿಮ್ಮ ಆಪ್ತರೊಂದಿಗೆ ಜಗಳವಾಗಬಹುದು ಮತ್ತು ವಿಷಯ ನ್ಯಾಯಾಲಯ ಕಚೇರಿಯವರೆಗೂ ಹೋಗಬಹುದು.

# 45 ವರ್ಸಸ್ ಮಾರ್ಕ್ ; ಕ್ರಿಸ್ಮಸ್ ಹಬ್ಬಕ್ಕೆ ಬಾಕ್ಸಾಫೀಸ್ ಸಮರ

## ಕನ್ನಡದ ಸೂಪರ್ ಸ್ಟಾರ್‌ಗಳಿಗೆ ಬಾಲಿವುಡ್ ಸವಾಲು

ಸಾಮಾನ್ಯವಾಗಿ ಎರಡು ದೊಡ್ಡ ಚಿತ್ರಗಳು ಒಂದೇ ದಿನ ತೆರೆಗೆ ಬಂದರೆ ವ್ಯಾಪಾರ ಹಂಚಿಹೋಗುವ ಭಯ ಇರುತ್ತೆ. ಚಿತ್ರದ ಕಥೆ-ನಿರೂಪಣೆಯಲ್ಲಿ ಚೂರು ಯಾಮಾರಿದರೂ ಕೂಡ ಇನ್ನೊಂದು ಚಿತ್ರದ ಮುಂದೆ ಮತ್ತೊಂದು ಚಿತ್ರ ಸೋಲುವ ಹೆದರಿಕೆ ಇರುತ್ತೆ. ಯಾವ ಚಿತ್ರ ನೋಡಬೇಕು, ಯಾವ ಚಿತ್ರ ನೋಡಬಾರದು ಎನ್ನುವ ಗೊಂದಲ ಪ್ರೇಕ್ಷಕರಿಗೆ ಕಾಡುತ್ತೆ. ಈ ಕಾರಣಕ್ಕೆ ಒಂದೇ ದಿನ...

ದೊಡ್ಡ ದೊಡ್ಡ ಚಿತ್ರಗಳನ್ನು ಒಟ್ಟೊಟ್ಟಿಗೆ ಬಿಡುಗಡೆ ಮಾಡಬೇಡಿ ಎಂದು ಎಲ್ಲ ಭಾಷೆಯಲ್ಲಿ ಚಿತ್ರಪ್ರೇಮಿಗಳು ಮನವಿಯನ್ನು ಮಾಡಿಕೊಳ್ಳುತ್ತಾರೆ. ಆಯಾ ಚಿತ್ರರಂಗದ ದೊಡ್ಡವರು ಕೂಡ ಈ ಸಲಹೆಯನ್ನೇ ನೀಡುತ್ತಾರೆ. ಆದರೆ. ಪ್ರೇಕ್ಷಕರ ಅಭಿಲಾಷೆ ಮತ್ತು ಚಿತ್ರರಂಗದವರ ಸಲಹೆಯನ್ನು ಕಡೆಗಣಿಸಿ ಅನೇಕರು ತಮ್ಮ ಚಿತ್ರವನ್ನು ಮತ್ತೊಂದು ಚಿತ್ರದ ಎದುರು ಬಿಡುಗಡೆ ಮಾಡುತ್ತಾರೆ.

ಅದರಲ್ಲಿಯೂ ಹಬ್ಬ ಹರಿದಿನ ಬಂದರೆ ಅಥವಾ ಸಾಲು ಸಾಲು ರಜೆಗಳಿದ್ದರೆ ಸಾಕು ಹಿಂದಡಿ ಇಡುವ ಪ್ರಶ್ನೆಯೇ ಇರಲ್ಲ. ಜಿದ್ದಿಗೆ ಬಿದ್ದವರಂತೆ ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡುತ್ತಾರೆ. ಇದಕ್ಕೆ ಈ ಕ್ರಿಸ್ಮಸ್ ಹಬ್ಬದಂದು ನಡೆಯುತ್ತಿರುವ ಸಿನಿ ಸಮರ ಮತ್ತೊಂದು ಸಾಕ್ಷಿ.

ಹೌದು, ಎಲ್ಲರಿಗೆ ಗೊತ್ತಿರುವಂತೆ ಈ ಕ್ರಿಸ್ಮಸ್ ಹಬ್ಬದಂದು ಅಂದರೆ ಡಿಸೆಂಬರ್ 25ಕ್ಕೆ ಕಿಚ್ಚ ಸುದೀಪ್ ಅಭಿನಯದ ಮಾರ್ಕ್ ಚಿತ್ರ ಬಿಡುಗಡೆಯಾಗುತ್ತಿದೆ. ಅವತ್ತೇ ಉಪೇಂದ್ರ.. ಶಿವರಾಜ್ ಕುಮಾರ್.. ರಾಜ್ ಬಿ ಶೆಟ್ಟಿ.. ಅಭಿನಯದ ಅರ್ಜುನ್ ಜನ್ಯ ನಿರ್ದೇಶನದ ಚೊಚ್ಚಲ ಚಿತ್ರ 45 ಕೂಡ ಬಿಡುಗಡೆಯಾಗುತ್ತಿದೆ.

ಇವೆರಡು ಕನ್ನಡದ ಬಹುನಿರೀಕ್ಷಿತ ಚಿತ್ರಗಳು. ಸಾಲದಕ್ಕೆ ಈ ಎರಡು ಚಿತ್ರಗಳಿಗೆ ಪ್ಯಾನ್ ಇಂಡಿಯಾ ಸದ್ದು ಮಾಡುವ ತಾಖತ್ತು ಇದೆ. ಬೇರೆ ಭಾಷೆಯವರ ಕಣ್ಣು ಕೂಡ ಈ ಎರಡು ಚಿತ್ರಗಳ ಮೇಲಿದೆ. ಹೀಗಿರುವಾಗ ಇದೀಗ ಕ್ರಿಸ್ಮಸ್ ಹಬ್ಬದಂದು ಬಾಲಿವುಡ್ ತಮ್ಮ ಹೊಸ ಸೂಪರ್ ಸ್ಟಾರ್ ಕಾರ್ತಿಕ್ ಆರ್ಯನ್ ಅವರನ್ನು ಕಣಕ್ಕಿಳಿಸುತ್ತಿದೆ.

ಹೌದು, ತು ಮೇರಿ ಮೇ ತೇರಾ, ಮೇ ತೇರಾ ತು ಮೇರಿ.. ಕಾರ್ತಿಕ್ ಆರ್ಯನ್ ಮತ್ತು ಅನನ್ಯಾ ಪಾಂಡೆ ಅಭಿನಯದ ಚಿತ್ರ. ಈ ಮೊದಲು ಮುಂದಿನ ವರ್ಷದ ಪ್ರೇಮಿಗಳ ಹಬ್ಬದಂದು ಅಂದರೆ ಫೆಬ್ರವರಿ 14ರಂದು ಬಿಡುಗಡೆಯಾಗಬೇಕಿತ್ತು. ಆಲಿಯಾ ಭಟ್ ಅಭಿನಯದ ಯಶ್ ರಾಜ್ ನಿರ್ಮಾಣದ ಆಲ್ಫಾ ಕ್ರಿಸ್ಮಸ್ ಹಬ್ಬದಂದು ತೆರೆಗೆ ಬರಬೇಕಿತ್ತು.

ಆದರೆ ಈಗ ವಿಎಫ್‌ಎಕ್ಸ್ ಕೆಲಸ ಇನ್ನೂ ಪೂರ್ಣವಾಗದ ಹಿನ್ನೆಲೆ, ಆದಿತ್ಯ ಚೋಪ್ರಾ ತಮ್ಮ ಆಲ್ಫಾ ಚಿತ್ರದ ಬಿಡುಗಡೆಯನ್ನು ಮುಂದಿನ ವರ್ಷದ ಏಪ್ರಿಲ್‌ಗೆ ಮುಂದೂಡಿದ್ದಾರೆ. ಈ ಹಿನ್ನೆಲೆ ಕ್ರಿಸ್ಮಸ್ ಸ್ಲಾಟ್ ಖಾಲಿ ಇದೆ, ಕನ್ನಡದ ಚಿತ್ರಗಳಿಂದ ತಮಗೆ ತುಂಬಾ ಹಿನ್ನೆಡೆಯಾಗದು ಎಂದುಕೊಂಡು ಕರಣ್ ಜೋಹರ್ ತಮ್ಮ ತು ಮೇರಿ ಮೇ ತೇರಾ, ಮೇ ತೇರಾ ತು ಮೇರಿ ಚಿತ್ರವನ್ನು ತೆರೆಗೆ ತರುತ್ತಿದ್ದಾರೆ. ಬಹುಶಃ ಕಾಂತಾರ 1 ಎದುರು ಬಂದ ತಮ್ಮ ಸನ್ನಿ ಸಂಸ್ಕಾರಿ ಕಿ ತುಳಸಿ ಕುಮಾರಿ ಚಿತ್ರದ ಕಥೆ ಏನಾಯ್ತು ಎನ್ನುವುದನ್ನು ಕರಣ್ ಜೋಹರ್ ಮರೆತಿರಬೇಕೇನೋ.



ಒಟ್ನಲ್ಲಿ ಸದ್ಯ ಡಿಸೆಂಬರ್ 25ಕ್ಕೆ 45.. ಮಾರ್ಕ್ ಮತ್ತು ತು ಮೇರಿ ಮೇ ತೇರಾ, ಮೇ ತೇರಿ ತು ಮೇರಾ ಚಿತ್ರಗಳು ಬಾಕ್ಸಾ ಫೀಸ್‌ನಲ್ಲಿ ಮುಖಾಮುಖಿಯಾಗಲಿವೆ. ತೆಲುಗು ಮತ್ತು ತಮಿಳು ಚಿತ್ರರಂಗದಿಂದ ಕೂಡ ಈ ಬಾಕ್ಸಾ ಫೀಸ್ ಸಮರದಲ್ಲಿ ಸೂಪರ್ ಸ್ಟಾರ್ ಗಳು ಕಣಕ್ಕಿಳಿಯುವ ನಿರೀಕ್ಷೆ ಇದೆ. ಪ್ಯಾನ್ ಇಂಡಿಯಾದ ಈ ಕಾಲದಲ್ಲಿ ಈ ಚಿತ್ರಗಳಲ್ಲಿ ಯಾವ ಚಿತ್ರಕ್ಕೆ ಗೆಲುವು ಸಿಗುತ್ತೆ ಎನ್ನುವುದನ್ನು ಕಾದು ನೋಡಬೇಕಿದೆ.

Disclaimer: ಈ ವರದಿಯಲ್ಲಿ ನೀಡಲಾಗಿರುವ ಸಿನಿಮಾದ ಬಾಕ್ಸ್ ಆಫೀಸ್ ಅಂಕಿ ಅಂಶಗಳ ಮಾಹಿತಿಯನ್ನು https://www.sacnilk.com/, https://x.com/taran_adarsh, https://x.com/rameshlaus?lang=en, ನಿರ್ಮಾಣ ಸಂಸ್ಥೆಗಳು ಹಾಗೂ ಸಾರ್ವಜನಿಕವಾಗಿ ಲಭ್ಯವಿರುವ ಹಲವು ವೇದಿಕೆಗಳಿಂದ ತೆಗೆದುಕೊಳ್ಳಲಾಗಿದೆ. ಸಿನಿಮಾಗೆ ಸಂಬಂಧಿಸಿದ ಬಾಕ್ಸ್ ಆಫೀಸ್ ಕಲೆಕ್ಷನ್‌ಗಳ ಕುರಿತು ಪ್ರಕಟಿಸುವ ವರದಿಗಳಿಗೆ ಫಿಲ್ಮಿಬೀಟ್ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.

## ಇನ್ಮುಂದೆ ಪ್ರತಿ ವರ್ಷ ಸಿನಿಮಾಗಳಿಗೆ ಪ್ರಶಸ್ತಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಚಿತ್ರನಗರಿ ಮಾಡಲು 160 ಎಕರೆ ಜಾಗವನ್ನು ವಾರ್ತಾ ಇಲಾಖೆಗೆ ಹಸ್ತಾಂತರಿಸಲಾಗಿದೆ. ಎರಡು ತಿಂಗಳಲ್ಲಿ ಕಾನೂನು ಪ್ರಕ್ರಿಯೆ ಮುಗಿಸಿ ಚಿತ್ರನಗರಿ ನಿರ್ಮಾಣ ಕಾರ್ಯ ಆರಂಭವಾಗಲಿದೆ ಎಂದು ಸಿಎಂ ತಿಳಿಸಿದರು.

ಸಿನಿಮಾ ತಾರೆಯರು ಪರದೆ ಮೇಲೆ ಕಾಣುವಷ್ಟೇ ಮೌಲ್ಯಯುತವಾಗಿ ನಿಜ ಜೀವನದಲ್ಲೂ ನಡೆದುಕೊಳ್ಳಬೇಕು. ಡಾ.ರಾಜ್ ಕುಮಾರ್ ಅವರು ಪರದೆ ಮೇಲೆ ಮಾತ್ರವಲ್ಲ, ನಿಜ ಜೀವನದಲ್ಲೂ ಅದೇ ಮೌಲ್ಯಗಳನ್ನು ಪಾಲಿಸಿದರು. ಈ ಕಾರಣಕ್ಕೆ ಜನಮಾನಸದಲ್ಲಿ ಅವರು ಶಾಶ್ವತವಾಗಿ ನೆಲೆಸಿದ್ದಾರೆ ಎಂದು ಮುಖ್ಯಮಂತ್ರಿ ಅಭಿಪ್ರಾಯಪಟ್ಟಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇಲ್ಲಿನ ಘಟಿಕೋತ್ಸವ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2018-19ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಸಿಎಂ ಮಾತನಾಡಿದರು.

ಸಿನಿಮಾ ಅತ್ಯಂತ ಪ್ರಭಾವಿ ಮಾಧ್ಯಮ. ಸಮಾಜದ ಮೇಲೆ ಆಳವಾದ ಪರಿಣಾಮ ಬೀರುತ್ತದೆ. ಆದ್ದರಿಂದ ಸಿನಿಮಾ ತಾರೆಯರು ಪರದೆ ಮೇಲೆ ಮಾತ್ರವಲ್ಲ, ನಿಜ ಜೀವನದಲ್ಲೂ ಅಷ್ಟೇ ಮೌಲ್ಯಯುತವಾಗಿ ಬದುಕಬೇಕು. ಸಮಾಜ ತಿದ್ದುವ ಸಿನಿಮಾಗಳನ್ನು ಹೆಚ್ಚೆಚ್ಚು ತಯಾರಿಸಿ ಎಂದು ಕರೆ ನೀಡಿದರು.

ನಮ್ಮ ಸರ್ಕಾರ ಕನ್ನಡ ಸಿನಿಮೋದ್ಯಮದ ಆರೋಗ್ಯಕಾರಿ ಪ್ರಗತಿ ಮತ್ತು ಬೆಳವಣಿಗೆಗೆ ಸದಾ ಬೆಂಬಲ ನೀಡುತ್ತದೆ. ಕೇವಲ ಸಬ್ಸಿಡಿಗಾಗಿ ಸಿನಿಮಾ ಮಾಡಬೇಡಿ. ಒಳ್ಳೆ ಸಿನಿಮಾ ಮಾಡಿ, ಜನ ಮೆಚ್ಚುವ, ಸಮಾಜದ ಮೇಲೆ ಉತ್ತಮ ಪರಿಣಾಮ ಬೀರುವ ಸಿನಿಮಾ ಮಾಡಿದರೆ ಸಬ್ಸಿಡಿ ನೀಡಿದ್ದಕ್ಕೂ ಸಾರ್ಥಕವಾಗುತ್ತದೆ. ಸದ್ಯ ಬಾಕಿ ಇರುವ ಎಲ್ಲಾ ವರ್ಷದ ಸಬ್ಸಿಡಿಯನ್ನೂ ಒಟ್ಟಿಗೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಚಿತ್ರನಗರಿ ಮಾಡಲು 160 ಎಕರೆ ಜಾಗವನ್ನು ವಾರ್ತಾ ಇಲಾಖೆಗೆ ಹಸ್ತಾಂತರಿಸಲಾಗಿದೆ. ಎರಡು ತಿಂಗಳಲ್ಲಿ ಕಾನೂನು ಪ್ರಕ್ರಿಯೆ ಮುಗಿಸಿ ಚಿತ್ರನಗರಿ ನಿರ್ಮಾಣ ಕಾರ್ಯ ಆರಂಭವಾಗಲಿದೆ ಎಂದು ತಿಳಿಸಿದರು.



ಹಿಂದಿನ ಸರ್ಕಾರ ಆಯಾ ವರ್ಷವೇ ಚಲನಚಿತ್ರ ಪ್ರಶಸ್ತಿಗಳನ್ನು ವಿತರಿಸದ ಕಾರಣಕ್ಕೇ 2018ರ ಸಾಲಿನಿಂದ ಪ್ರಶಸ್ತಿಗಳು ಬಾಕಿ ಉಳಿದಿವೆ. ಇದು ತಪ್ಪು. ಹೀಗಾಗಬಾರದು. ಆದ್ದರಿಂದ ನಮ್ಮ ಸರ್ಕಾರ ಇನ್ನು ಮುಂದೆ ಪ್ರತಿ ವರ್ಷ ಸಿನಿಮಾ ಪ್ರಶಸ್ತಿಗಳನ್ನು ನೀಡಲು ಸೂಚಿಸಲಾಗಿದೆ ಎಂದರು.

ಆಯಾ ವರ್ಷದ ಸಿನಿಮಾಗಳಿಗೆ ಮರು ವರ್ಷವೇ ಕೊಟ್ಟರೆ ಮಾತ್ರ ಅರ್ಥಪೂರ್ಣ ಆಗಿರುತ್ತದೆ. ಇಂದು ಎರಡು ವರ್ಷದ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಕೆಲವೇ ದಿನಗಳಲ್ಲಿ ಹಳೆ ಸರ್ಕಾರದ ಅವಧಿಯ ಇನ್ನೆರಡು ವರ್ಷದ ಸಿನಿಮಾ ಪ್ರಶಸ್ತಿಗಳನ್ನು ನೀಡಲು ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು. ಬಳಿಕ ಆಯಾ ವರ್ಷದ ಪ್ರಶಸ್ತಿಗಳನ್ನು ಮರು ವರ್ಷದ ಆರಂಭದಲ್ಲೇ ನೀಡಲು ವೇದಿಕೆಯಲ್ಲೇ ಸೂಚನೆ ನೀಡಿದರು.

ಮೊದಲೆಲ್ಲಾ ಸಿನಿಮಾಗಳ ಸಂಖ್ಯೆ ಕಡಿಮೆ ಇತ್ತು. ನಾವು ನೋಡಿದ್ದನ್ನೇ ಮತ್ತೆ ಮತ್ತೆ ನೋಡುತ್ತಿದ್ದೆವು. ಈಗ ಸಿಕ್ಕಾಪಟ್ಟೆ ಸಿನಿಮಾಗಳು ಬರುತ್ತಿವೆ. ಆದರೆ, ಸಾಮಾಜಿಕ ಕಾಳಜಿ ಮತ್ತು ಗುಣಮಟ್ಟ ಕಡಿಮೆ ಆಗುತ್ತಿದೆ. ಆದ್ದರಿಂದ ಈಗ ಸಿನಿಮಾ ನೋಡುವುದನ್ನೇ ಕಡಿಮೆ ಮಾಡಿದ್ದೇನೆ ಎಂದು ಸಿಎಂ ತಿಳಿಸಿದರು.

ನಟ, ನಿರ್ಮಾಪಕ, ನಿರ್ದೇಶಕ ರಿಷಬ್ ಶೆಟ್ಟಿ ಮಾತನಾಡಿ, ನಾನು ಒಬ್ಬ ಚಿಕ್ಕ ಕಲಾವಿದ. ಚಿತ್ರರಂಗದ ಗಣ್ಯಾತಿಗಣ್ಯರು ಇಲ್ಲಿದ್ದಾರೆ. ಚಿತ್ರಗಳಿಗೆ ಪ್ರಶಸ್ತಿ ನೀಡಿ ಗೌರವಿಸುವುದರಿಂದ ಹೆಚ್ಚಿನ ಪ್ರೋತ್ಸಾಹ ನೀಡಿದಂತೆ ಆಗುತ್ತದೆ. ಮೈಸೂರಿನಲ್ಲಿ 160 ಎಕರೆ ಪ್ರದೇಶದಲ್ಲಿ ಚಿತ್ರನಗರಿ ನಿರ್ಮಾಣ ಆಗುತ್ತಿರುವುದು ಸಂತಸದ ವಿಷಯ. ಜಗತ್ತಿನಲ್ಲಿ ತಂತ್ರಜ್ಞಾನ ಬೆಳೆಯುತ್ತಿದೆ. ಚಿತ್ರರಂಗ ಅದಕ್ಕೆ ಹೊಂದಿಕೊಂಡು ಹೋಗಬೇಕಿದೆ. ಇದಕ್ಕೆ ಚಿತ್ರನಗರಿ ಪೂರಕವಾಗುತ್ತದೆ. ನಾನು ಈ ಹಿಂದೆ ಕಿರಿಕ್ ಪಾರ್ಟಿ ಚಿತ್ರಕ್ಕೆ ರಾಜ್ಯ ಪ್ರಶಸ್ತಿ ಪಡೆದಿದ್ದೆ. ಇಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು ಚಿತ್ರಕ್ಕೆ ಪ್ರಶಸ್ತಿ ದೊರೆತಿರುವುದು ಸಂತಸ ತಂದಿದೆ.

ನಾನು ಈ ಪ್ರಶಸ್ತಿಯನ್ನು ಎಲ್ಲಾ ಸರ್ಕಾರಿ ಶಾಲೆಯ ಮಕ್ಕಳಿಗೆ ಅರ್ಪಿಸುವೆ ಎಂದು ತಮ್ಮ ಮನದ ಮಾತನ್ನು ಹಂಚಿಕೊಂಡರು.

## ಬಾಸ್ ಸಿನಿಮಾ ರೆಡಿ : ದರ್ಶನ್ ಕೇಸ್ ಕಥೆಯಾ..?



ಬಾಸ್. ಇದು ಸಿನಿಮಾ ಹೆಸರು. ಅಂದಹಾಗೆ 2011ರಲ್ಲಿ ದರ್ಶನ್-ನವ್ಯಾ ನಾಯರ್ -ಹುಚ್ಚ ಖ್ಯಾತಿಯ ರೇಖಾ ಲೀಡ್ ರೋಲ್ ಮಾಡಿದ್ದ ಬಾಸ್ ಸಿನಿಮಾ ಬಂದಿತ್ತು. ಈಗ ಅದೇ ಹೆಸರಿನಲ್ಲಿ ಮತ್ತೊಂದು ಸಿನಿಮಾ ರೆಡಿಯಾಗಿದೆ. ಶೂಟಿಂಗ್ ಕಂಪ್ಲೀಟ್ ಆಗಿದೆ. ಪೋಸ್ಟ್ ಪ್ರೊಡಕ್ಷನ್ ಹಂತಕ್ಕೆ ಹೋಗಿರುವ ಬಾಸ್ ಸಿನಿಮಾದಲ್ಲಿ ಕಳೆದ ವರ್ಷ ನಡೆದ ದರ್ಶನ್ ಕೇಸ್ ಕಥೆಯೇ ಇದೆಯಾ.. ಪ್ರಶ್ನೆ ಮೂಡಿಸುತ್ತಿರುವುದು ಚಿತ್ರ ತಂಡ ರಿಲೀಸ್ ಮಾಡಿರುವ ಪೋಸ್ಟರ್.

ಪೋಸ್ಟರಿನಲ್ಲಿ ಬಾಸ್ ಟೈಟಲ್ ಕೆಳಗೆ ಸತ್ಯಮೇವ ಜಯತೇ ಎಂಬ ಟ್ಯಾಗ್ ಲೈನ್ ಇದೆ. ಇಡೀ ಕರ್ನಾಟಕವನ್ನೇ ಬೆಚ್ಚಿ ಬೀಳಿಸಿದ ಕ್ರೈಂ ಸ್ಟೋರಿ ಆಧಾರಿತ ಚಿತ್ರ ಎಂದು ಬರೆಯಲಾಗಿದೆ. ಬೆಂಗಳೂರು ನ್ಯೂಸ್ ಎಂಬ ಪೇಪರಿನಲ್ಲಿ ಪಾಳ್ಯದ ಪೈಪ್ ಲೈನ್ ಬಳಿ ಅಪರಿಚಿತ ದೇಹ ಪತ್ತೆ. ಪೊಲೀಸರಿಂದ ತನಿಖೆ ಎಂಬ ಹೆಡ್ ಲೈನ್ ಇದೆ. ಅಫ್‌ಕೋರ್ಸ್ ಅದು ಇಂಗ್ಲಿಷಿನಲ್ಲಿದೆ. ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನದ ಹೊಣೆ ಹೊತ್ತಿರುವುದು ವಿ ಲವ. ನಿರ್ಮಾಣದ ಹೊಣೆ ಹೊತ್ತಿರುವುದು ಸಿರಿ ಪ್ರೊಡಕ್ಷನ್ಸ್. ಬೆಂಗಳೂರಿನಲ್ಲಿ ಒಂದೇ ಹಂತದಲ್ಲಿ ಚಿತ್ರೀಕರಣ ನಡೆದಿದೆ. ಕೆಲವೇ ದಿನಗಳಲ್ಲಿ ಟೀಸರ್ ಬಿಡುಗಡೆಯಾಗಲಿದೆ. ಡಿಸೆಂಬರ್‌ನಲ್ಲಿ ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ ಎಂದು ಮಾಹಿತಿ ನೀಡಿದ್ದಾರೆ ಡೈರೆಕ್ಟರ್.

ಅಂದಹಾಗೆ ರೇಣುಕಾಸ್ವಾಮಿ ಮೃತದೇಹ ಸಿಕ್ಕಿದ್ದು ಕಾಮಾಕ್ಷಿಪಾಳ್ಯ ಠಾಣಾ ವ್ಯಾಪ್ತಿಯಲ್ಲಿ. ಅದು ಮೊದಲು ಸಿಕ್ಕಾಗ ಅಪರಿಚಿತ ಮೃತದೇಹವೇ ಆಗಿತ್ತು. ಅಷ್ಟೇ ಅಲ್ಲ.. ದರ್ಶನ್ ಅವರನ್ನು ಅಭಿಮಾನಿಗಳು, ಗೆಳೆಯರು, ಅಂದಿಗೂ.. ಇಂದಿಗೂ ಕರೆಯುವುದು ಡಿ ಬಾಸ್ ಎಂದೇ. ಇತ್ತೀಚೆಗೆ ಇಡೀ ಕರ್ನಾಟಕವನ್ನೇ ಬೆಚ್ಚಿ ಬೀಳಿಸಿದ ಪ್ರಕರಣದಲ್ಲಿ ದರ್ಶನ್ ಕೇಸ್ ನಂ.1.

ಚಿತ್ರದ ಹೀರೋ ಪಾತ್ರದಲ್ಲಿ ನಟಿಸಿರುವುದು ತನುಷ್ ಶಿವಣ್ಣ. ಸೆಲಬ್ರಿಟಿಯಾಗಿ ನಟಿಸಿದ್ದೇನೆ. ಎಲ್ಲರೂ ನನ್ನನ್ನು ಬಾಸ್ ಬಾಸ್ ಅಂತಾ ಕರೀತಾ ಇರ್ತಾರೆ. ಹೀಗಾಗಿ ಚಿತ್ರಕ್ಕೆ ಇದೇ ಟೈಟಲ್ ಇಟ್ಟಿದ್ದೇವೆ ಅಂತಾರೆ. ನಾಯಕಿಯಾಗಿ ಮೋನಿಕಾ ಗೌಡ ನಟಿಸಿದ್ದು ಅವರ ಪಾತ್ರದ ಹೆಸರು ಶೀಲಾ. ಸಂದೀಪ್, ವೀರೇನ್ ಕೇಶವ್, ಸುಜನ್ ಶೆಟ್ಟಿ, ದುನಿಯಾ ಮಹೇಶ್, ಜೋಶ್ ಅಕ್ಷಯ್, ಮಹೇಶ್, ಮನು, ಮಂಡ್ಯ ರವಿ, ಮಹೇಂದ್ರ ರಾವ್, ಪೃಥ್ವಿ, ನಿಶಾಂತ್, ಮೋಹಿತ್, ಲಕ್ಷ್ಮಣ್ ಪೂಜಾರಿ ನಟಿಸಿರುವ ಚಿತ್ರಕ್ಕೆ ಡೆವಿ ಸುರೇಶ್ ಸಂಗೀತ ನೀಡುತ್ತಿದ್ದಾರೆ. ಛಾಯಾಗ್ರಾಹಕರಾಗಿ ಶರತ್ ಹಾಗೂ ಸಹ ನಿರ್ದೇಶಕರಾಗಿ ಮಂಜುನಾಥ್ ಇದ್ದಾರೆ.

## ಜನವರಿಗೂ ರಿಲೀಸ್ ಇಲ್ಲ ಧ್ರುವ ಸರ್ಜಾ ಸಿನಿಮಾ ಕೆಡಿ; ಪ್ರೇಮ್ ಸಿನಿಮಾ ರಿಲೀಸ್ ಯಾವಾಗ?


ಮಾರ್ಟಿನ್ ಸೋಲು ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಪ್ಯಾನ್ ಇಂಡಿಯಾ ಎಂಟ್ರಿಗೆ ಹಿನ್ನೆಡೆಯಾಗಿತ್ತು. ಇದೇ ಬೆನ್ನಲ್ಲೇ ಮತ್ತೊಂದು ಪ್ಯಾನ್ ಇಂಡಿಯಾ ಸಿನಿಮಾ ರೆಡಿಯಾಗಿದೆ. ಅದುವೇ ಜೋಗಿ ಪ್ರೇಮ್ ಆಕ್ಷನ್ ಕಟ್ ಹೇಳಿರುವ ಕೆಡಿ: ದಿ ಡೆವಿಲ್. ಈ ಸಿನಿಮಾಗಾಗಿ ಅವರ ಅಭಿಮಾನಿಗಳು ಎದುರು ನೋಡುತ್ತಿದ್ದಾರೆ. ಆದರೆ, ಇನ್ನೇನು ರಿಲೀಸ್‌ಗೆ ಮುಹೂರ್ತ ಫಿಕ್ಸ್ ಆಗಿದೆ ಎಂದುಕೊಳ್ಳುವಾಗಲೇ ಮತ್ತೆ ಪೋಸ್ಟ್‌ಪೋನ್ ಎನ್ನುವ ಸುದ್ದಿ ಹರಿದಾಡುತ್ತೆ.

ಎರಡೂವರೆ ಮೂರು ವರ್ಷಗಳಿಂದ ನಿರ್ಮಾಣ ಆಗುತ್ತಿರುವ ಕೆಡಿ ಬಿಗ್ ಬಜೆಟ್ ಸಿನಿಮಾ. ಬಾಲಿವುಡ್‌ನ ದಿಗ್ಗಜರಾದ ಸಂಜಯ್ ದತ್, ಶಿಲ್ಪಾ ಶೆಟ್ಟಿ, ವಿ.ರವಿಚಂದ್ರನ್ ಸೇರಿದಂತೆ ದೊಡ್ಡ ಬಳಗವೇ ಈ ಸಿನಿಮಾದಲ್ಲಿದೆ. ಹೀಗಿರುವಾಗ ಕೆಡಿ ಸಹಜವಾಗಿಯೇ ನಿರೀಕ್ಷೆಯನ್ನು ಹುಟ್ಟಾಕಿದೆ. ಆದರೆ, ಪ್ರತಿ ಬಾರಿ ಪೋಸ್ಟ್‌ಪೋನ್ ಆಗುತ್ತಿರೋದು ಧ್ರುವ ಫ್ಯಾನ್ಸ್‌ಗೆ ಕಿರಿಕಿರಿ ಆದಂತೆ ಕಾಣುತ್ತಿದೆ.

ಕೆವಿಎನ್ ಸಂಸ್ಥೆ ನಿರ್ಮಾಣ ಮಾಡುತ್ತಿರುವ ಕೆಡಿಗೆ ಯಾಕೆ ಇನ್ನೂ ಮುಹೂರ್ತ ಕೂಡಿ ಬಂದಿಲ್ಲ? ಜೋಗಿ ಪ್ರೇಮ್ ಸಿನಿಮಾ ಶೂಟಿಂಗ್ ಮುಗಿಸಿಲ್ಲವೇ? ತಡವಾಗುತ್ತಿರುವ ಹಿನ್ನೆಲೆಯೇನು? ಜನವರಿ 2026ಗೆ ರಿಲೀಸ್ ಆಗದೇ ಹೋದರೆ, ಮತ್ಯಾವಾಗ? ಗಣರಾಜ್ಯೋತ್ಸವಕ್ಕೆ ಕೆವಿಎನ್ ಇನ್ನೊಂದು ಸಿನಿಮಾ ರಿಲೀಸ್ ಮಾಡ್ತಿರೋದ್ಯಾಕೆ? ಸ್ಯಾಂಡಲ್‌ವುಡ್‌ನ ಈ ಬಿಸಿ ಬಿಸಿ ಚರ್ಚೆಯ ಅಸಲಿ ಮ್ಯಾಟರ್ ಏನು? ತಿಳಿಯುವುದಕ್ಕೆ ಮುಂದೆ ಓದಿ.

**ಕೆಡಿ ರಿಲೀಸ್‌ಗೆ ಮೀನಾಮೇಷ ಯಾಕೆ?:** ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾಗೆ ಪ್ಯಾನ್ ಇಂಡಿಯಾ ಲೆವೆಲ್‌ನಲ್ಲಿ ಸದ್ದು ಮಾಡುವುದಕ್ಕೆ ಕೆಡಿ ತುಂಬಾನೇ ಮುಖ್ಯ. ಜೋಗಿ ಪ್ರೇಮ್ ಸಿನಿಮಾ ಏನಿಲ್ಲ ಅಂದರೂ ರಿಲೀಸ್ ಮುನ್ನ ಭರ್ಜರಿ ಹೈಪ್ ಕ್ರಿಯೇಟ್ ಮಾಡುತ್ತೆ. ಪ್ರೇಕ್ಷಕರನ್ನು ಆರಾಮಾಗಿ ಥಿಯೇಟರ್‌ಗೆ ಕರೆದುಕೊಂಡು ಬರುತ್ತೆ. ಬಿಡುಗಡೆಗೂ ಮುನ್ನವೇ ಜನರು ಥಿಯೇಟರ್ ಮುಂದೆ ಕ್ಯೂ ನಿಲ್ಲುವಂತೆ ಮಾಡುವ ತಾಕತ್ತು ಇವರಿಗಿದೆ. ಹೀಗಿದ್ದರೂ, ರಿಲೀಸ್ ಮಾಡುವುದಕ್ಕೆ ಮೀನಾ ಮೇಷ ಎಣಿಸುತ್ತಿರೋದ್ಯಾಕೆ? ಈ ಪ್ರಶ್ನೆ ಸಿನಿಮಾ ಮಂದಿಯನ್ನೇ ಕಾಡುತ್ತಿದೆ.

**ಜನವರಿಯಲ್ಲಿ ರಿಲೀಸ್ ಆಗಲ್ಲ?:** ಗಾಂಧಿನಗರದಲ್ಲಿ ಕೆಡಿ ರಿಲೀಸ್ ಬಗ್ಗೆ ಸುದ್ದಿಯೊಂದು ಓಡಾಡುತ್ತಿದೆ. ಕೆವಿಎನ್ ಸಂಸ್ಥೆ ಅಧಿಕೃತವಾಗಿ ರಿಲೀಸ್ ಡೇಟ್ ಅನೌನ್ಸ್ ಮಾಡದೇ ಹೋದರೂ, ಜನವರಿ 23ಕ್ಕೆ ರಿಲೀಸ್ ಆಗುತ್ತೆ ಎಂದು ಹೇಳಲಾಗಿತ್ತು. ಆದ್ರೀಗ ಗಣರಾಜ್ಯೋತ್ಸವಕ್ಕೂ ಸಿನಿಮಾ ರಿಲೀಸ್ ಆಗಲ್ಲ. ಯುಗಾದಿ ಹಬ್ಬಕ್ಕೆ ಪ್ಯಾನ್ ಮಾಡಿದೆ ಚಿತ್ರತಂಡ ಎಂದು ಹೇಳಲಾಗುತ್ತಿದೆ. ಆದರೆ, ಅದೇ ಹಬ್ಬಕ್ಕೆ ಅವರದ್ದೇ ಸಿನಿಮಾ ರಾಕಿಂಗ್ ಸ್ಟಾರ್ ಯಶ್ ನಟನೆಯ ಟಾಕ್ಸಿಕ್ ರಿಲೀಸ್ ಆಗಲಿದೆ. ಹೀಗಾಗಿ ಅಂದೂ ಕೂಡ ರಿಲೀಸ್ ಆಗೋದು ಅನುಮಾನ.



**ಕೆಡಿ ರಿಲೀಸ್‌ಗೆ ಡೇಟ್‌ಗಳೇ ಇಲ್ವಾ?:** ಜೋಗಿ ಪ್ರೇಮ್ ಹಿಂದೊಮ್ಮೆ ಇದೇ ವರ್ಷ ಡಿಸೆಂಬರ್‌ಗೆ ರಿಲೀಸ್ ಮಾಡುತ್ತಿರೋದಾಗಿ ಹೇಳಿದ್ದರು. ಆದ್ರೀಗ ಡಿಸೆಂಬರ್‌ನಲ್ಲಿ ಸಿನಿಮಾಗಳು ಬ್ಯಾಕ್ ಟು ಬ್ಯಾಕ್ ರಿಲೀಸ್ ಆಗುತ್ತಿವೆ. ಹೀಗಾಗಿ ಜನವರಿಗೆ ಪೋಸ್ಟ್‌ಪೋನ್ ಮಾಡಿದ್ದಾರೆ ಎನ್ನಲಾಗಿತ್ತು. ಆದರೆ, ಜನವರಿಯಲ್ಲೂ ಕೆವಿಎನ್ ಅವರದ್ದೇ ಎರಡು ಸಿನಿಮಾಗಳು ರಿಲೀಸ್ ಆಗಲಿದೆ. ಅವರೇ ನಿರ್ಮಿಸುತ್ತಿರುವ ದಳಪತಿ ವಿಜಯ್ ನಟನೆಯ ಜನನಾಯಗನ್ ರಿಲೀಸ್ ಆಗುತ್ತಿದೆ. ಇನ್ನೊಂದು ಕಡೆ ದುನಿಯಾ ವಿಜಯ್ ನಟನೆಯ ಲ್ಯಾಂಡ್‌ಲಾರ್ಡ್ ಸಿನಿಮಾವನ್ನು ವಿತರಣೆ ಮಾಡುತ್ತಿದ್ದಾರೆ. ಇದು ಜನವರಿ 23ಕ್ಕೆ ಬಿಡುಗಡೆಯಾಗಲಿದೆ. ಹೀಗಾಗಿ ಜನವರಿಯಲ್ಲಿ ರಿಲೀಸ್ ಆಗೋದು ಅನುಮಾನ. ಫೆಬ್ರವರಿ ಡ್ರೈ ತಿಂಗಳು. ಮಾರ್ಚ್ ಟಾಕ್ಸಿಕ್ ತಿಂಗಳು. ಇದರ ಹಿಂದೇನೆ ಐಪಿಎಲ್ ಶುರುವಾಗುತ್ತೆ. ಹೀಗಾಗಿ ಜೂನ್‌ವರೆಗೂ ಬಿಡುಗಡೆಗೆ ಮುಹೂರ್ತ ಕಾಣಿಸುತ್ತಿಲ್ಲ.

**ಪೋಸ್ಟ್‌ಪೋನ್ ಆಗಿದ್ದು ಎಷ್ಟು ಸಿನಿಮಾಗಳು?:** ಕೆಡಿ: ದಿ ಡೆವಿಲ್ ಸಿನಿಮಾ ಕೆಲವು ಬಾರಿ ರಿಲೀಸ್ ಆಗುವ ಬಗ್ಗೆ ವದಂತಿಗಳು ಹಬ್ಬಿದ್ದವು. ಆ ವೇಳೆ ಹಲವು ಸಿನಿಮಾಗಳು ಪೋಸ್ಟ್‌ಪೋನ್ ಆಗಿದ್ದವು. ನಾಲ್ಕೈದು ಬಾರಿ ಹೀಗೆ ಪ್ಲ್ಯಾನ್ ಆಗಿತ್ತು. ಆಗಲೂ ಕೆಲವು ಸಿನಿಮಾ ಪೋಸ್ಟ್‌ಪೋನ್ ಆಗಿದ್ದವು. ಒಟ್ನಲ್ಲಿ ಯಾವಾಗ ಸಿನಿಮಾ ರಿಲೀಸ್ ಆಗುತ್ತೆ ಅನ್ನೋದು ಯಕ್ಷ ಪ್ರಶ್ನೆಯಾಗಿ ಉಳಿದಿದೆ.

## ಬೆಟ್ಟಿಂಗ್ ಪ್ರಕರಣ: ರೈನಾ, ಧವನ್‌ಗೆ ಸೇರಿದ 11.14 ಕೋಟಿ ಆಸ್ತಿ ಮುಟ್ಟುಗೋಲು

• ಪ್ರಜೋದಯ ವರದಿ

**ನವದೆಹಲಿ:** ಬೆಟ್ಟಿಂಗ್ ಸಂಬಂಧಿ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರರಾದ ಸುರೇಶ್ ರೈನಾ ಹಾಗೂ ಶಿಖರ್ ಧವನ್ ಅವರಿಗೆ ಸೇರಿದ 11.14 ಕೋಟಿ ಆಸ್ತಿ ಯನ್ನು ಜಾರಿ ನಿರ್ದೇಶನಾಲಯಮುಟ್ಟುಗೋಲು ಹಾಕಿಕೊಂಡಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣ ದಾಖಲಿ ಸಿಕೊಳ್ಳಲಾಗಿದೆ. ಹೆಸರಿನ ಆನ್‌ಲೈನ್ ಬೆಟ್ಟಿಂಗ್ ವೆಬ್‌ಸೈಟ್ ವಿರುದ್ಧದ ಪ್ರಕರಣದಲ್ಲಿ ಧವನ್ ಅವರಿಗೆ ಸೇರಿದ 4.5 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಮತ್ತು ರೈನಾ ಅವರ 6.64 ಕೋಟಿ ರೂ. ಮೌಲ್ಯದ ಮ್ಯೂಚುವಲ್ ಫಂಡ್ ಅನ್ನು ಮುಟ್ಟುಗೋಲು ಹಾಕಲು ತಾತ್ಕಾಲಿಕ ಆದೇಶ ಹೊರಡಿಸಲಾಗಿದೆ. ಮಾಜಿ ಕ್ರಿಕೆಟಿಗರಿಬ್ಬರೂ ಗೊತ್ತಿದ್ದೇ ಒಪ್ಪಂದ ಮಾಡಿಕೊಂಡಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೇ ತನಿಖೆಯ ಭಾಗವಾಗಿ ಮಾಜಿ ಕ್ರಿಕೆಟಿಗರಾದ ಯುವರಾಜ್ ಸಿಂಗ್, ರಾಬಿನ್ ಉತ್ತಪ್ಪ, ನಟರಾದ ಸೋನು ಸೂದ್, ಊರ್ವಶಿ ರೌಟೇಲಾ, ಅಂಕುಶ್ ಹಜ್ರಾ ಮತ್ತು ಟಿಎಂಸಿ ಮಾಜಿ ಸಂಸದೆ ಮಿಮಿ ಚಕ್ರವರ್ತಿ ಅವರನ್ನು ವಿಚಾರಣೆ ಗೊಳಪಡಿಸಲಾಗಿತ್ತು.

# ನಿವೇಶನ ಅಳತೆ ವೇಳೆ ಉದ್ವಿಗ್ನ ಪರಿಸ್ಥಿತಿ: ಕರ್ತವ್ಯಕ್ಕೆ ಅಡ್ಡಿ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಒಕ್ಕಲಿಗರ ಕಲ್ಯಾಣ ಮಂಟಪ ರಸ್ತೆಯ ಸರ್ವೆ ನಂ.33/66 ಮತ್ತು 23/21 ಸಿ ನಿವೇಶನ ಅಳತೆಗೆ ಪುರಸಭೆ ಅಧಿಕಾರಿಗಳು ತೆರಳಿದ ವೇಳೆ ಉದ್ವಿಗ್ನ ವಾತಾವರಣ ನಿರ್ಮಾಣಗೊಂಡು, ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಲಾಯಿತು.

ಮಾಜಿ ಸಚಿವ ಬಿ.ಶಿವರಾಮ್ ಅವರ ಅರ್ಜಿಯ ಮೇರೆಗೆ ಅವರ ಹೆಸರಿನಲ್ಲಿರುವ ನಿವೇಶನ ಹಾಗು ಕೆಪಿಸಿಸಿ ಹೆಸರಿನಲ್ಲಿರುವ ನಿವೇಶನದ ಅಳತೆ ಕಾರ್ಯಕ್ಕೆ ಪುರಸಭೆಯ ಅಧಿಕಾರಿಗಳು ಹಾಗು ನೌಕರರ ತಂಡ ಜೆಸಿಬಿ ವಾಹನದೊಂದಿಗೆ ಸ್ಥಳಕ್ಕೆ ಆಗಮಿಸಿದ್ದಂತೆಯೇ ಸ್ಥಳದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಯಿತು.

ಅಳತೆ ಆರಂಭಿಸುತ್ತಿದ್ದಂತೆ ಕೆಪಿಸಿಸಿ ಕಚೇರಿಗೆ ಸೇರಿದ ಜಾಗ ಮತ್ತು ಬಿ.ಶಿವರಾಮ್ ಅವರಿಗೆ ಸೇರಿದ ನಿವೇಶನದ ಪಕ್ಕದಲ್ಲಿ ವಾಸವಿರುವ ಕುಸೀದ ಬೇಗಂ ಮತ್ತು ಕುಟುಂಬಸ್ಥರು ಜಾಗದ ಅಳತೆಗೆ ವಿರೋಧಿಸಿ ಗಲಾಟೆ ಸೃಷ್ಟಿ ಮಾಡಿದರು.

ಘಟನೆಯ ವೇಳೆ ಮುನ್ನೆಚ್ಚರಿಕಾ ಕ್ರಮವಾಗಿ 50ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಸ್ಥಳದಲ್ಲಿ ನಿಯೋಜಿಸಲಾಗಿತ್ತು. ಅರಸೀಕೆರೆ ಉಪವಿಭಾಗದ ಡಿವೈಎಸ್‌ಪಿ ಪಿ.ಗೋಪಿ ಮತ್ತು ವೃತ್ತ ನಿರೀಕ್ಷಕ ರೇವಣ್ಣ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಲವನ್ನು ನಿಯೋಜಿಸಲಾಯಿತು. ಆದರೆ, ನಿವೇಶನದ ಪಕ್ಕದ ಜಾಗದಲ್ಲಿ ವಾಸವಿರುವ ಕುಸೀದ ಬೇಗಂ ಹಾಗು ಅವರ ಕುಟುಂಬಸ್ಥರು ಅಳತೆಯನ್ನು ವಿರೋಧಿಸಿ ಹೈಡ್ರಾಮ ನಡೆಸಿದರು. ಅವರಿಗೆ ಮತ್ತು ಅಳತೆಗೆ ಬಂದಿರುವ ಜಾಗಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಈ ಜಾಗ ನಮಗೆ ಸೇರಿದ್ದು, ಮಾಜಿ ಸಚಿವ ಬಿ. ಶಿವರಾಮ್ ನಮ್ಮನ್ನು ಹೆದರಿಸಿ ಇಲ್ಲಿ ಕಾಂಗ್ರೆಸ್ ಕಚೇರಿ ಕಟ್ಟಲು ಮುಂದಾಗಿದ್ದಾರೆ. ನಮ್ಮ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ. ಈ ಜಾಗ ನಮ್ಮದು ಎಂದು ಆಕ್ರೋಶ ವ್ಯಕ್ತಪಡಿಸಿ, ಅಳತೆಗೆ ಆಗಮಿಸಿದ ಪುರಸಭೆ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿಗೆ ನಮ್ಮನ್ನು ಸಾಯಿಸಿ ಗುಂಡಿಯಲ್ಲಿ ಮುಚ್ಚಿಬಿಡಿ, ನಂತರ ಜಾಗದ ಅಳತೆ ಮಾಡಿ ಎಂದು ಕೂಗಾಡಿ ಗಲಾಟೆ ಸೃಷ್ಟಿಸಿದರು. ಸ್ಥಳದಲ್ಲಿ ಇದ್ದ ಪೊಲೀಸರು ತಕ್ಷಣ ಮಧ್ಯ ಪ್ರವೇಶಿಸಿ ಸ್ಥಿತಿಯನ್ನು ನಿಯಂತ್ರಿಸಿದರು. ಸ್ಥಳದಲ್ಲಿನ ಗೊಂದಲದ ನಿರ್ಮಾಣಗೊಂಡ ಹಿನ್ನಲೆ ಅಳತೆಯ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು.



ಕಾರ್ಯಾಚರಣೆಯಲ್ಲಿ ಪುರಸಭಾ ಸಿಬ್ಬಂದಿ ಜಯರಾಮ್, ಸಲ್ಮಾನ್ ಮತ್ತು ಸಿ.ಪಿ.ಐ ಶಿವನ ಗೌಡ ಪಾಟೀಲ್, ಪುರಸಭಾ ಸದಸ್ಯ ಗಿರೀಶ್ ಸೇರಿ ಅಧಿಕಾರಿ ವರ್ಗದವರು ಹಾಜರಿದ್ದರು.

**ಪುರಸಭೆ ನೌಕರರು ಮತ್ತು ಅಧಿಕಾರಿಗಳ ಮೇಲೆ ಮತ್ತು ಪುರಸಭಾ ವಾಹನಗಳ ಮೇಲೆ ಕಲ್ಲುತೂರಾಟ ನಡೆಸಿರುವ ಕುಸೀದ ಬೇಗಂ ಮತ್ತು ಕುಟುಂಬಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸಲಾಗುವುದು.**
**- ಲಕ್ಷ್ಮಣ್, ಪುರಸಭೆ ಕಂದಾಯ ನಿರೀಕ್ಷಕ**

**ಅರ್ಜಿಯ ಆಧಾರದಲ್ಲಿ ಕಾನೂನುಬದ್ಧ ಅಳತೆಯ ಕಾರ್ಯ ಮಾಡುತ್ತಿದ್ದ ಪುರಸಭೆ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ, ಜೆ.ಸಿ.ಬಿ. ವಾಹನಕ್ಕೆ ಕಲ್ಲು ತೂರಾಟ ನಡೆಸಿದ್ದಾರೆ. ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಲಾಗಿದೆ.**
**-ಬಸವರಾಜ್ ಶಿಗ್ಗಾವಿ, ಪುರಸಭಾ ಮುಖ್ಯಾಧಿಕಾರಿ**

## ಕೃಷಿಯಲ್ಲಿ ಆಧುನಿಕ ತಾಂತ್ರಿಕತೆ ಅಳವಡಿಸಿಕೊಳ್ಳಿ



» ಮೊದಲನೇ ಪುಟದಿಂದ

ಯಾವುದೇ ಪ್ರಶಸ್ತಿಗಾಗಿ ನಾನು ಕೃಷಿ ಮಾಡಿಕೊಂಡು ಬರಲಿಲ್ಲ. ಅರ್ಜಿ ಹಾಕದೆ ನನಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸುವ ಮೂಲಕ ಸರ್ಕಾರ ನನ್ನ ಮೇಲೆ ಜವಾಬ್ದಾರಿ ಹೆಚ್ಚಿಸಿದೆ ಎಂದರು.

ಬಂಗಾರದ ಮನುಷ್ಯ ಚಿತ್ರವೇ ನನಗೆ ಕೃಷಿಕನಾಗಲು ಸ್ಫೂರ್ತಿ. ತುಂಬಾ ಜನರು ನನ್ನನ್ನು ಸರ್ಕಾರಿ ಅಧಿಕಾರಿ ಆಗುವಂತೆ ಒತ್ತಾಯ ಮಾಡಿದರೂ ಕೃಷಿ ಮಾಡಬೇಕೆಂದು ದೃಢ ಸಂಕಲ್ಪ ಮಾಡಿದೆ. ನನ್ನ ಜಮೀನಿನಲ್ಲಿ ಕೃಷಿ ಹಾಗು ತೋಟಗಾರಿಕೆಗೆ ಸಂಬಂಧಿಸಿದ ಎಲ್ಲಾ ಬೆಳೆಗಳನ್ನು ಬೆಳೆಯಲಾಗಿದೆ. ಪಾಲಿ ಹೌಸ್‌ನ್ನು ನಾನು ಮೊದಲು ಕಂಡು ಹಿಡಿದಿದ್ದು, ಇದೀಗ ಎಲ್ಲರೂ ಈ ಪದ್ಧತಿ ಬಳಸುತ್ತಿದ್ದಾರೆ. ಹೊಸ ತಳಿಗಳನ್ನು ಕೃಷಿ ಮಾಡಿ ಯಶಸ್ಸುಗಳಿಸಲಾಯಿತು. ಕೃಷಿಯಲ್ಲಿ ಕೆಲವೊಮ್ಮೆ ನಷ್ಟ ಅನುಭವಿಸಬಹುದು. ಆದರೆ, ರೈತರು ಧೃತಿಗೆಡದೆ ಕೃಷಿ ಕಾಯಕ ಮಾಡಬೇಕು. ಪ್ರತಿಯೊಬ್ಬ ರೈತನು ತಾನೇ ವಿಜ್ಞಾನ ಆಗಬೇಕು. ಜಮೀನಿನಲ್ಲಿ ಸೂಕ್ತ ರಸ್ತೆ ಸೇರಿ ಇತರೆ ವ್ಯವಸ್ಥೆ ಮಾಡಿಕೊಂಡು ಕೃಷಿ ಮಾಡಬೇಕೆಂದು ಸಲಹೆ ನೀಡಿದರು.

ಯುವ ಸಮುದಾಯ ಕೇವಲ ಸಣ್ಣ ಪುಟ್ಟ ಕೆಲಸಕ್ಕೆ ಸಿಮೀತರಾಗದೆ, ತಮ್ಮ ಮನೆಗಳಲ್ಲಿ ಜಮೀನಿದ್ದರೆ ಆಧುನಿಕ ಕೃಷಿಯಲ್ಲಿ ತೊಡಗಿಕೊಂಡು ಯಶಸ್ಸು ಕಾಣಬೇಕು. ಜೀವನದಲ್ಲಿ ಶಿಸ್ತು, ದೃಢ ಸಂಕಲ್ಪ, ಶ್ರಮ ವಹಿಸಿ ದುಡಿದರೆ ಯಾವುದೇ ಕೆಲಸವಾದರೂ ಯಶಸ್ಸು ಕಾಣಲು ಸಾಧ್ಯ ಎಂದು ಹೇಳಿದರು. ಕೃಷಿ ಇಲಾಖೆಯ ಜಂಟಿ ನಿರ್ದೇಶಕ ರಮೇಶ್, ಕೃಷಿ ಇಲಾಖೆಯ ಸುಧಾಕರ್ ಇತರರು ಹಾಜರಿದ್ದರು.

## ಕಬ್ಬಳಿ ಶ್ರೀ ಬಸವೇಶ್ವರ ಸ್ವಾಮಿ ಜಾತ್ರೆ ಸಂಪನ್ನ



» ಮೊದಲನೇ ಪುಟದಿಂದ

ಪೂಜೆ, ನಾಗರ ದೇವತೆಗಳಿಗೆ ಪುಷ್ಪಾರ್ಚನೆ, ದೇಗುಲದ ಹಿಂಭಾಗದಲ್ಲಿರುವ ಇಷ್ಟಾರ್ಥ ಸಿದ್ಧಿ ಬಸವ ಮೂರ್ತಿಗೆ ಕ್ಷೀರಾಭಿಷೇಕ, ಗೋ ಪೂಜೆ ನೆರವೇರಿಸಿದರು.

ನಂತರ ದೇಗುಲದ ಮುಂಭಾಗದ ಗರುಡ ಕಂಬದ ಮೇಲಿರುವ ದೀಪ ಬೆಳಗಿಸಲಾಯಿತು. ಸ್ವಾಮೀಜಿ ಧರ್ಮ ಧ್ವಜವನ್ನು ಕೆಳಕ್ಕೆ ಇಳಿಸುವ ಮೂಲಕ ಜಾತ್ರಾ ಮಹೋತ್ಸವಕ್ಕೆ ತೆರೆ ಎಳೆದರು. ಭಕ್ತರು ಉತ್ಸವ ಮೂರ್ತಿಯನ್ನು ಮೂಲ ಸ್ಥಾನದಿಂದ ಕಬ್ಬಳಿ ಗ್ರಾಮಕ್ಕೆ ಮೆರವಣಿಗೆಯಲ್ಲಿ ಕರೆತಂದು ಗುಡಿ ತುಂಬಿಸಿದರು. ಕಬ್ಬಳಿ ಮಠದ ಶಿವಪುತ್ರನಾಥ ಸ್ವಾಮೀಜಿ, ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಸಿಬ್ಬಂದಿ, ಕಬ್ಬಳಿ ಹಾಗೂ ಸುತ್ತಮುತ್ತಲ ಗ್ರಾಮಗಳ ಭಕ್ತರು ಭಾಗವಹಿಸಿದ್ದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ತೆಪ್ಪೋತ್ಸವ, ಸರ್ಪೋತ್ಸವ, ಸಾಮೂಹಿಕ ವಿವಾಹ, ಧಾರ್ಮಿಕ ಸಭೆಗಳು ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಕಳೆದ ಐದು ದಿನಗಳವರೆಗೆ ನಡೆದವು. ರೈತರು ರಾಸುಗಳ ಮೈಮೇಲೆ ತೀರ್ಥ ಹಾಕಿಸಿದರು. ಪ್ರತಿ ನಿತ್ಯ ಸಾವಿರಾರು ಭಕ್ತರು ದೇವರ ದರ್ಶನ ಪಡೆದರು. ಶ್ರೀಕ್ಷೇತ್ರ ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ಗುಡಿಗೌಡ ಪ್ರಕಾಶ್, ಸುತ್ತಮುತ್ತಲಗ್ರಾಮಸ್ಥರು ಪಾಲ್ಗೊಂಡಿದ್ದರು.

# ಭಾರತೀಯ ಬೌಲಿಂಗ್ ದಾಳಿಗೆ ಕಂಗಾಲಾದ ಆಸೀಸ್

## ಟೀಂ ಇಂಡಿಯಾಕ್ಕೆ 48 ರನ್ ಜಯ | ಅಕ್ಷರ್ ಪಟೇಲ್‌ಗೆ ಪಂದ್ಯ ಶ್ರೇಷ್ಠ ಪ್ರಶಸ್ತಿ

• ಪ್ರಜೋದಯ ವರದಿ

**ಕರಾರ (ಗೋಲ್ಡ್ ಕೋಸ್ಟ್):** ಆತಿಥೇಯ ಆಸ್ಟ್ರೇಲಿಯಾ ವಿರುದ್ಧ ನಡೆದ 4ನೇ ಟಿ-20 ಪಂದ್ಯದಲ್ಲಿ ಭಾರತ ತಂಡ 48 ರನ್‌ಗಳ ಬೃಹತ್ ಗೆಲುವು ದಾಖಲಿಸಿತು. ಆ ಮೂಲಕ 5 ಪಂದ್ಯಗಳ ಸರಣಿಯಲ್ಲಿ 2-1ರಿಂದ ಮುನ್ನಡೆ ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ಭಾರತ, ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 167 ರನ್ ಗಳಿಸಿತ್ತು. 168 ರನ್‌ಗಳ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡ ಭಾರತೀಯರ ಬೌಲಿಂಗ್ ದಾಳಿಗೆ ನಲುಗಿ ಹೋಯಿತು. ಅಂತಿಮವಾಗಿ ಆಸೀಸ್ 18.2 ಓವರ್‌ಗಳಲ್ಲಿ 119ರನ್ ಗಳಿಸಿ ಆಲೌಟ್ ಆಯಿತು.

ಭಾರತದ ಪರ ಅದ್ಭುತ ಬೌಲಿಂಗ್ ಪ್ರದರ್ಶಿಸಿದ ವಾಷಿಂಗ್‌ಟನ್ ಸುಂದರ್ 3ರನ್‌ಗೆ 3 ವಿಕೆಟ್ ಪಡೆದು ಮಿಂಚಿದರು. ಅಕ್ಷರ್ ಪಟೇಲ್ ಹಾಗೂ ಶಿವಂ ದುಬೆ ತಲಾ 2 ವಿಕೆಟ್ ಪಡೆದುಕೊಂಡರೆ, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬುಮ್ರಾ ಹಾಗೂ ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಪಡೆದುಕೊಂಡರು.

ಆಸ್ಟ್ರೇಲಿಯಾ ಪರ ನಾಯಕ ಮಿಚೆಲ್ ಮಾರ್ಷ್ (30) ರನ್ ಹಾಗೂ ಮ್ಯಾಥ್ಯೂ ಶಾರ್ಟ್ 25 ರನ್ ಗಳಿಸಿದ್ದು ಹೊರತುಪಡಿಸಿ ಉಳಿದ ಯಾವುದೇ ಬ್ಯಾಟರ್ ಕ್ರೀಸ್ ಕಚ್ಚಿ ಆಡುವಲ್ಲಿ ವಿಫಲರಾದರು.

ಇದಕ್ಕೂ ಮೊದಲು, ಭಾರತದ ಪರ 46 ರನ್ ಗಳಿಸಿದ ಶುಭಮನ್ ಗಿಲ್ ಗರಿಷ್ಠ ರನ್ ಗಳಿಸಿದ ಆಟಗಾರ ಎನಿಸಿಕೊಂಡರು. ಅಭಿಷೇಕ್ ಶರ್ಮಾ (28), ಶಿವಂ ದುಬೆ (22) ಅಕ್ಷರ್ ಪಟೇಲ್ (ಅಜೇಯ 21) ಹಾಗೂ ನಾಯಕ ಸೂರ್ಯ ಕುಮಾರ್ ಯಾದವ್ (20) ರನ್ ಸಿಡಿಸುವ ಮೂಲಕ ತಂಡದ ಮೊತ್ತವನ್ನು 160ರ ಗಡಿ ದಾಟಿಸಿದರು. ಆಸ್ಟ್ರೇಲಿಯಾ ಪರ ಉತ್ತಮ ಬೌಲಿಂಗ್ ಪ್ರದರ್ಶಿಸಿದ ನಾಥನ್ ಎಲ್ಲಿಸ್ 21-3 ಹಾಗೂ ಆಡಂ ಜಂಪಾ 45-3 ವಿಕೆಟ್ ಪಡೆದು ಮಿಂಚಿದರು. ಮಾರ್ಕಸ್ ಸ್ಟೋಯಿನಿಸ್ ಮತ್ತು ಕ್ಸೇವಿಯರ್ ಬಾರ್ಟ್‌ಲೆಟ್ ತಲಾ ಒಂದೊಂದು ವಿಕೆಟ್ ಪಡೆದುಕೊಂಡರು.




## ತವರು ಚಾರಿಟೆಬಲ್ ಟ್ರಸ್ಟ್‌ನಿಂದ ದಾಸೋಹ ಸೇವೆ



• ಪ್ರಜೋದಯ ವರದಿ

**ಹಾಸನ:** ಕೂಲಿ ಕಾರ್ಮಿಕರು, ನಿರ್ಗತಿಕರು, ಬಡವರಿಗೆ ಅನುಕೂಲವಾಗಲೆಂಬ ಉದ್ದೇಶ ದಿಂದ ನಗರದ ತವರು ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್‌ನಿಂದ ಪ್ರತಿ ಗುರುವಾರ ನಾರಾಯಣ ಸೇವೆ ಹೆಸರಿನಲ್ಲಿ ದಾಸೋಹ ಆರಂಭಿಸಲಾಗಿದೆ.

ಬೆಳಿಗ್ಗೆ 8 ರಿಂದ 11ರ ವರೆಗೆ ನಗರದ ಎನ್.ಆರ್.ವೃತ್ತದಲ್ಲಿ ಉಪಹಾರ ವಿತರಿಸಲಾಯಿತು.

ತವರು ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಡಾ|| ಪಾಲಾಕ್ಷ ಅವರು ಮಾತನಾಡಿ, ಹಸಿವಿ ನಿಂದ ನರಳುವವರ ಹೊಟ್ಟೆ ತುಂಬಿಸುವುದು. ಮಾನವ ಸೇವೆಯೇ ದೇವರ ಸೇವೆ ಎಂಬ ಧ್ಯೇಯದೊಂದಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೆಂದರು.

ಮುಂದಿನ ದಿನಗಳಲ್ಲಿ ಹೆಚ್ಚಿನ ಸ್ಥಳಗಳಲ್ಲಿ ಉಪಹಾರ ವಿತರಣೆ ಮಾಡುವ ಯೋಜನೆಯೂ ಇದೆ. ಹಸಿದವನಿಗೆ ಅನ್ನ ನೀಡುವುದು ಅತಿದೊಡ್ಡ ಪೂಜೆ ಎಂಬ ಮಾತನ್ನು ಜೀವನದ ಧ್ಯೇಯವಾಗಿ ಅಳವಡಿಸಿಕೊಳ್ಳಲಾಗಿದೆ. ನಿಸ್ವಾರ್ಥ ಸೇವೆಯ ಮೂಲಕ ಹಾಸನದಲ್ಲಿ ಸಾಮಾಜಿಕ ಸ್ಪಂದನೆಯ ಹೊಸ ಸಂಸ್ಕೃತಿ ಬೆಳೆಸುತ್ತಿದೆಯೆಂದರು. ತವರು ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್‌ನ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ಸೂಚಿಸಿದರು.

## ನಿಯಮ ಉಲ್ಲಂಘನೆ: ಮದ್ಯದ ಅಂಗಡಿ ಮೇಲೆ ಕ್ರಮಕ್ಕೆ ಆಗ್ರಹ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ಹಾಗು ನಗರದಲ್ಲಿ ಅಬಕಾರಿ ನಿಯಮಗಳನ್ನು ಗಾಳಿಗೆ ತೂರಿ ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮದ್ಯ ಮಾರಾಟ ಮಾಡುತ್ತಿರುವ ಮದ್ಯದ ಅಂಗಡಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ತಾಲ್ಲೂಕು ಕೆಡಿಪಿ ಸದಸ್ಯರಾದ ಬೀಕ್ಕೋಡು ಸಿ.ಚೇತನ್‌ಗೌಡ ಹಾಗು ನಂದೀಶ್ ಅವರು ಅಬಕಾರಿ ಅಧಿಕಾರಿಗಳಿಗೆ ದೂರು ನೀಡಿದರು.



ಮನವಿ ಸಲ್ಲಿಸಿ ನಂತರ ಮಾತನಾಡಿದ ಚೇತನ್‌ಗೌಡ, ಬೇಲೂರು ಪಟ್ಟಣದಲ್ಲಿರುವ ಸಿ.ಎಲ್-2, ಸಿ.ಎಲ್-7, ಸಿ.ಎಲ್-9 ಮದ್ಯದ ಅಂಗಡಿಗಳಿಗೆ ಅಬಕಾರಿ ಇಲಾಖೆ ಕೆಲವು ನಿಯಮಗಳನ್ನು ಜಾರಿಗೆ ತಂದಿದೆ. ಅದರಂತೆ ಮಾಲೀಕರು ಮಾರಾಟ ಮಾಡಬೇಕು ಹಾಗು ಕೆಲವು ಅನುಕೂಲಗಳನ್ನು ಕೊಡಬೇಕೆಂದು ನಿಯಮಗಳನ್ನು ನೀಡಿದ್ದರೂ, ಕೆಲ ಮದ್ಯದ ಅಂಗಡಿಗಳ ಮಾಲೀಕರು ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಅದರಿಂದ ಗ್ರಾಹಕರಿಗೆ ಹೊರೆಯಾಗುತ್ತಿದೆ. ಇಂತಹ ವ್ಯವಹಾರ ಹಲವಾರು ದಿನ ಗಳಿಂದ ನಡೆಯುತ್ತಿದೆ ಎಂದು ದೂರಿದರು.

ಸಿ.ಎಲ್.-2ನಲ್ಲಿ ಕೇವಲ ಮದ್ಯ ಮಾರಾಟ ಮಾಡಬೇಕು, ಸಿ.ಎಲ್-7ನಲ್ಲಿ ಮದ್ಯಪ್ರಿಯರು ಕುಳಿತು ಸೇವನೆ ಮಾಡುವ ವ್ಯವಸ್ಥೆ ಮಾಡಿರಬೇಕು, ಸಿ.ಎಲ್.-9ನಲ್ಲಿ ಮದ್ಯದ ಮಾರಾಟದ ಜೊತೆಗೆ ಉಪಹಾರ ವ್ಯವಸ್ಥೆ, ಕೊಠಡಿ ಇರಬೇಕೆಂಬ ನಿಯಮ ಇದ್ದರೂ ಅದನ್ನು ಗಾಳಿಗೆ ತೂರಿ ಶೌಚಾಲಯವಿಲ್ಲದೆ ಕೆಲ ಮದ್ಯದ ಅಂಗಡಿಗಳು ನಡೆಯುತ್ತಿವೆ. ಇಷ್ಟೆಲ್ಲ ನಿಯಮಗಳನ್ನು ಮಾಲೀಕರು ಗಾಳಿಗೆ ತೂರಿ ಯಾವ ಭಯವಿಲ್ಲದೆ ನಿರ್ಭಯವಾಗಿ ಗ್ರಾಹಕರಿಗೆ ಮೋಸ ಮಾಡುತ್ತಿದ್ದಾರೆ. ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದಾರೆ. ಇಂತಹ ಮದ್ಯದ ಅಂಗಡಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು. ಕೈಗೊಳ್ಳದಿದ್ದಲ್ಲಿ ಜಿಲ್ಲಾ ಅಬಕಾರಿ ಅಧಿಕಾರಿಗಳಿಗೆ ದೂರು ನೀಡ ಬೇಕಾಗುತ್ತದೆಂದು ಎಚ್ಚರಿಸಿದರು. ಕೆಡಿಪಿ ಸದಸ್ಯ ನವೀನ್, ಗ್ಯಾರಂಟಿ ಸಮಿತಿ ಸದಸ್ಯ ನಿಶ್ಚಲ್ ಇದ್ದರು.

## ಅರೇಹಳ್ಳಿ ಗ್ರಾಮ ಪಂಚಾಯಿತಿಗೆ ಮೆಹಬೂಬ್ ಷರೀಫ್ ಉಪಾಧ್ಯಕ್ಷ

• ಪ್ರಜೋದಯ ವರದಿ

**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯರಾಗಿ ಮೆಹಬೂಬ್ ಷರೀಫ್ ಆಯ್ಕೆಯಾಗಿದ್ದಾರೆ.

ಪದ್ಮ ಮಂಜುನಾಥ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಮೆಹಬೂಬ್ ಹಾಗು ಫರ್ಹಾನಾ ಬಾನು ನಾಮಪತ್ರ ಸಲ್ಲಿಸಿದ್ದರು. ಗುರುವಾರ ನಡೆದ ಚುನಾವಣೆಯಲ್ಲಿ ಒಟ್ಟು 22 ಮತಗಳ ಪೈಕಿ ಮೆಹಬೂಬ್ ಷರೀಫ್ 12 ಮತ ಪಡೆದು ಜಯಶೀಲರಾದರೆ ಫರ್ಹಾನಾ ಬಾನು 10 ಮತ ಗಳಿಸಿ ಪರಾಭವಗೊಂಡರು. ಮೆಹಬೂಬ್ ಷರೀಫ್ ಅವರನ್ನು ಗ್ರಾಮ ಪಂಚಾಯಿತಿ ಸದಸ್ಯರು, ಗ್ರಾಮಸ್ಥರು ಅಭಿನಂದಿಸಿದರು.

ಚುನಾವಣಾಧಿಕಾರಿ ಸತೀಶ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಂದ್ರಯ್ಯ, ಗ್ರಾಮ ಪಂಚಾಯಿತಿ ಸದಸ್ಯರಾದ ವೀರೇಶ್, ಶಶಿ ಕುಮಾರ್, ಲಕ್ಷ್ಮಣ್, ಸಂಗಪ್ಪ, ಅಣ್ಣಪ್ಪ, ಮುನೀರಾ, ಪಾರ್ವತಿ, ಗ್ರಾಮಸ್ಥರಾದ ಗಂಗಾಧರ್, ಮುಜೀಬ್, ಅನಿಲ್, ಸಿದ್ದೇಶ್, ಅಣ್ಣಪ್ಪ, ಅಕ್ಬರ್ ಅಲಿ ಇತರರಿದ್ದರು.



## ಎಫ್‌ಆರ್‌ಪಿ ನಿಗದಿ ಚರ್ಚಿಸಲು ಪ್ರಧಾನಿಗೆ ಪತ್ರ

» ಮೊದಲನೇ ಪುಟದಿಂದ

ಹೆಬ್ಬಾಳ್ಕರ್ ಅವರು ಸಕ್ಕರೆ ಕಾರ್ಖಾನೆ ಮಾಲೀಕರಾಗಿದ್ದರಿಂದ ಅವರು ಪ್ರತಿಭಟನಾ ಸ್ಥಳಕ್ಕೆ ಹೋಗಿಲ್ಲ. ಬದಲಾಗಿ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸ್ಥಳಕ್ಕೆ ಹೋಗಿ ರೈತರ ಜೊತೆಗೆ ಮಾತುಕತೆ ನಡೆಸಿದ್ದಾರೆ ಎಂದರು.

ಎಫ್‌ಆರ್‌ಪಿ ನಿಗದಿ ಮಾಡುವುದು ಕೇಂದ್ರ ಸರ್ಕಾರ. ಈ ವರ್ಷವೂ 6-5-2025ರಂದು ಎಫ್‌ಆರ್‌ಪಿ ನಿಗದಿ ಮಾಡಲಾಗಿದೆ. 20255-26 ನೇ ಸಾಲಿನಲ್ಲಿ 10.25 ಇಳುವರಿಗೆ 3550 ಪ್ರತಿ ಟನ್ ನಿಗದಿ ಮಾಡಲಾಗಿದೆ. ಇದರಲ್ಲಿ ಸಾರಿಗೆ, ಕಟಾವು ಒಳಗೊಂಡಿದೆ. ಇಳುವರಿ 10.25ಕ್ಕಿಂತ ಹೆಚ್ಚಿದ್ದರೆ 3.46 ರೂಪಾಯಿ ನಿಗದಿ ಮಾಡಲಾಗಿದೆ. 9.5 ಕ್ಕಿಂತ ಇಳುವರಿ ಕಡಿಮೆ ಇದ್ದರೆ 3290.50 ಕೊಡಬೇಕೆಂದು ಕೇಂದ್ರ ತೀರ್ಮಾನ ಮಾಡಿದೆ ಎಂದು ವಿವರ ನೀಡಿದರು.

ಕಳೆದ ವರ್ಷ ಇಡೀ ದೇಶಕ್ಕೆ ಕೇವಲ 10 ಲಕ್ಷ ಮೆಟ್ರಿಕ್ ಟನ್ ರಫ್ತು ಮಾಡಲು ಮಾತ್ರ ಅವಕಾಶ ನೀಡಲಾಗಿತ್ತು. ಆದರೆ, ಕರ್ನಾಟಕವೊಂದರಲ್ಲೆ 41 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗಿತ್ತು. ಈ ಕಾರಣದಿಂದಲೂ ರೈತರಿಗೆ ಸಮಸ್ಯೆಯಾಗುತ್ತಿದೆ. ಎಥೆನಾಲ್ ವಿಚಾರದಲ್ಲೂ ಸಹ ಕೇಂದ್ರ ಸರ್ಕಾರವು ತಾರತಮ್ಯ ಧೋರಣೆಯನ್ನು ಅನುಸರಿಸುತ್ತಿದೆ. ಕರ್ನಾಟಕದಲ್ಲಿ 270 ಕೋಟಿ ಲೀಟರ್ ಎಥೆನಾಲ್ ಉತ್ಪಾದನಾ ಸಾಮರ್ಥ್ಯ ಇದ್ದರೂ ಸಹ 2024-25 ರಲ್ಲಿ 47 ಕೋಟಿ ಲೀಟರ್‌ಗಳನ್ನು ತೈಲ ಕಂಪನಿಗಳಿಗೆ ಖರೀದಿ ಮಾಡಲು ಹಂಚಿಕೆ ಮಾಡಲಾಗಿದೆ. ಇದು ಕೇಂದ್ರವು ಕರ್ನಾಟಕದ ರೈತರೊಂದಿಗೆ ಆಡುತ್ತಿರುವ ಆಟಕ್ಕೆ ಸ್ಪಷ್ಟ ಉದಾಹರಣೆಯಾಗಿದೆಂದು ಮುಖ್ಯಮಂತ್ರಿ ಆರೋಪಿಸಿದರು.

## ಆಕಸ್ಮಿಕ ಬೆಂಕಿ ಅವಘಡ ತಪ್ಪಿಸುವ ಪ್ರಾತ್ಯಕ್ಷಿಕೆ



» ಮೊದಲನೇ ಪುಟದಿಂದ

ಪ್ರಾಯೋಗಿಕವಾಗಿ ಮಾಹಿತಿ ನೀಡಿದರು.

ಚನ್ನರಾಯಪಟ್ಟಣ ಅಗ್ನಿ ಶಾಮಕ ಠಾಣೆಯ ಸಹಾಯಕ ಠಾಣಾಧಿಕಾರಿ ಕೆ.ಹೆಚ್. ಪುಟ್ಟಸ್ವಾಮಿ ನೇತೃತ್ವದಲ್ಲಿ ಸಿಬ್ಬಂದಿ ಜಗದೀಶ್, ಕುಮಾರ್, ಶಿವಾನಂದ ವಡೇರಾ, ಗಂಗಾಧರ್, ಯೋಗಾನಂದ ಅವರು ಅಗ್ನಿ ಅವಘಡ ನಿಯಂತ್ರಣದ ಬಗ್ಗೆ ಜಾಗೃತಿ ಕಾರ್ಯಕ್ರಮ ನಡೆಸಿಕೊಟ್ಟರು.

## ಫೆಬ್ರವರಿ 1 ರಿಂದ ಟಿ-20 ವಿಶ್ವಕಪ್ : ಬೆಂಗಳೂರಿಗೆ ಆತಿಥ್ಯ ಸಿಕ್ಕಿಲ್ಲ

• ಪ್ರಜೋದಯ ವರದಿ

**ನವದೆಹಲಿ:** ಮುಂದಿನ ವರ್ಷ ಫೆ.1ರಿಂದ ನಡೆಯಲಿರುವ ಟಿ-20 ವಿಶ್ವಕಪ್ ಟೂರ್ನಿ ಯ ಪಂದ್ಯಗಳನ್ನು ನಡೆಸಲು ಅಹಮದಾಬಾದ್, ದೆಹಲಿ, ಕೋಲ್ಕತ್ತಾ, ಚೆನ್ನೈ ಹಾಗೂ ಮುಂಬೈ ನಗರಗಳನ್ನು ಬಿಸಿಸಿಐ ಆಯ್ಕೆ ಮಾಡಿದೆ. ಅಹಮದಾಬಾದ್‌ನಲ್ಲಿ ಫೈನಲ್ ಪಂದ್ಯ ನಡೆಯಲಿದೆ. ಬೆಂಗಳೂರಿಗೆ ಆತಿಥ್ಯ ಸಿಕ್ಕಿಲ್ಲ.

## ಸ್ವಯಂ ಉದ್ಯೋಗ, ಕೈಗಾರಿಕೆ ಸ್ಥಾಪನೆಗೆ ನೆರವು



• ಪ್ರಜೋದಯ ವರದಿ

**ಹಾಸನ:** ಸ್ವಯಂ ಉದ್ಯೋಗ ಹಾಗು ಕೈಗಾರಿಕೆಗಳನ್ನು ಸ್ಥಾಪಿಸಲು ಹಣಕಾಸು ಸಹಾಯ, ಮಾರ್ಗದರ್ಶನ ನೀಡಲು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಹಲವು ಯೋಜನೆಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಜಾರಿಗೊಳಿಸಿವೆ ಎಂದು ಟೆಕ್ಸಾಕ್ ಕಾರ್ಯನಿರ್ವಹಣಾಧಿಕಾರಿ ಸಿದ್ದರಾಜು ಅವರು ತಿಳಿಸಿದರು.

ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜಿನಲ್ಲಿ ಗುರುವಾರ ಕೇಂದ್ರ ಕೈಗಾರಿಕೆ ಮತ್ತು ವಾಣಿಜ್ಯ, ಟೆಕ್ಸಾಕ್ ವತಿಯಿಂದ ಹಲವು ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಯುವಜನತೆ ಈ ಸದುಪಯೋಗವನ್ನು ಪಡೆದು ಸಣ್ಣ ಕೈಗಾರಿಕೆಯಿಂದ ಬಹು ಬೃಹತ್ ಕೈಗಾರಿಕೆ ನಿರ್ಮಾಣ ಮಾಡಲು ಮುಂದಾಗಬೇಕು. ಎಂಎಸ್‌ಎಂಇಗಳ ಕಾರ್ಯದಕ್ಷತೆಯ ಅರಿವು ಮೂಡಿಸುವುದು ಮತ್ತು ಇದರ ಪ್ರಯೋಜನ ತಿಳಿಸುವ ಕೆಲಸ ಎಲ್ಲೆಡೆ ನಡೆಯುತ್ತಿದೆಂದು ಹೇಳಿದರು.

ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಸಮನ್ವಯ ಮತ್ತು ಸಂಸ್ಥೆಗಳನ್ನು ಬಲಪಡಿಸುವುದು, ತಂತ್ರಜ್ಞಾನ ವೇದಿಕೆಗಳನ್ನು ನಿರ್ಮಿಸುವುದು ಮತ್ತು ಸಂಯೋಜಿಸುವುದು, ಸಂಸ್ಥೆಯ ಸಾಮರ್ಥ್ಯಗಳನ್ನು ಮತ್ತು ಮಾರುಕಟ್ಟೆ ಪ್ರವೇಶವನ್ನು ಹೆಚ್ಚಿಸುವುದು, ಉತ್ಪಾದನೆಗಳನ್ನು ಹೆಚ್ಚಿಸುವುದು ಹಾಗು ಹೆಚ್ಚಿನ ಹಸಿರೀಕರಣ ಮತ್ತು ಉದ್ಯಮಿಗಳ ಭಾಗವಹಿಸುವಿಕೆಯ ಕಡೆಗೆ ಖಾತರಿ ಪಡಿಸುವುದು, ಅನ್‌ಲೈನ್ ವಿವಾದ ಪರಿಹಾರ ಕಾರ್ಯವಿಧಾನ(ಒಡಿಆರ್)ಪ್ರವೇಶವನ್ನು ವಿಸ್ತರಿಸುವುದು ಪ್ರಮುಖ ಉದ್ದೇಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಪ್ರಾಂಶುಪಾಲ ಡಾ.ಹೆಚ್.ಜೆ. ಅಮರೇಂದ್ರ, ಇಂಡಸ್ಟ್ರೀಯಲ್ ಅಸೋಸಿಯೇಶನ್ ಅಧ್ಯಕ್ಷ ಶಿವರಾಮು, ನಿರ್ದೇಶಕ ಹೆಚ್.ಎ.ಕಿರಣ್, ಕೈಗಾರಿಕಾ ವಾಣಿಜ್ಯ ಇಲಾಖೆ ಮುಖ್ಯಸ್ಥ ಉಮೇಶ್, ಬಿ.ಕೆ. ರವಿಂದ್ರನಾಥ್, ಗೋಪಿನಾಥ್, ಡಾ.ಗೀತಾ ಕಿರಣ್, ಮೋಹನ್ ಹಾಜರಿದ್ದರು.

## 200 ಮೀ. ಓಟ ಸ್ಪರ್ಧೆ: ರಾಜ್ಯ ಮಟ್ಟಕ್ಕೆ ಆಯ್ಕೆ

• ಪ್ರಜೋದಯ ವರದಿ



**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿ ಪಟ್ಟಣ ವ್ಯಾಪ್ತಿಗೊಳಪಡುವ ರೋಟರಿ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಯೋಗಿತ್ ಪಿ.ಶೆಟ್ಟಿ 200ಮೀ. ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾ ಗಿದ್ದಾರೆ.

ಜಿಲ್ಲಾ ಕ್ರೀಡಾಂಗಣದಲ್ಲಿ ಇತ್ತೀಚೆಗೆ ಜರುಗಿದ 2025-26ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಶಾಲೆಯ ಮುಖ್ಯ ಶಿಕ್ಷಕಿ, ಶಿಕ್ಷಕರು ಹಾಗು ಸಿಬ್ಬಂದಿ ಅಭಿನಂದಿಸಿದ್ದಾರೆ.

# ಕಬ್ಬು ಬೆಳೆಗಾರರ ಹೋರಾಟ ಬೆಂಬಲಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಕಬ್ಬಿಗೆ ವೈಜ್ಞಾನಿಕ ಬೆಲೆ ನೀಡುವಂತೆ ಒತ್ತಾಯಿಸಿ ರಾಜ್ಯದಾದ್ಯಂತ ನಡೆಯುತ್ತಿರುವ ಹೋರಾಟವನ್ನು ಬೆಂಬಲಿಸಿ ಗುರುವಾರ ಜಿಲ್ಲಾಧಿಕಾರಿ ಕಚೇರಿ ಎದುರು ಭಾರತೀಯ ಕಿಸಾನ್ ಸಂಘದ ವತಿಯಿಂದ ಪ್ರತಿಭಟನೆ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಸಂಘದ ಜಿಲ್ಲಾ ಉಪಾಧ್ಯಕ್ಷ ಸಣ್ಣೇಗೌಡ ಅವರು ಮಾತನಾಡಿ, ಕಬ್ಬು ಬೆಳೆಗೆ ವೈಜ್ಞಾನಿಕ ಬೆಲೆ ನೀಡುವಂತೆ ಒತ್ತಾಯಿಸಿ ಬೆಳೆಗಾರರು ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತಿದ್ದಾರೆ. ವರ್ಷ ಪೂರ್ತಿ ಶ್ರಮ ವಹಿಸಿ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಕಂಗಾಲಾಗಿರುವ ರೈತರಿಗೆ ಸರ್ಕಾರ ತಕ್ಷಣ ನೆರವಿಗೆ ಧಾವಿಸಬೇಕೆಂದು ಆಗ್ರಹಿಸಿದರು.

ಹಲವು ದಿನಗಳಿಂದ ಪ್ರತಿಭಟನೆಗಳು ರಾಜ್ಯದ ವಿವಿಧೆಡೆ ನಡೆಯುತ್ತಿದ್ದರೂ ಸರ್ಕಾರ ಕಣ್ಣುಮುಚ್ಚಿ ಕುಳಿತಿರುವುದು ಖಂಡನೀಯ. ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಕಬ್ಬು ಬೆಳೆಗಾರರ ಮನವಿಗೆ ಸ್ಪಂದಿಸಿ, ಅವರ ಬೇಡಿಕೆಗಳನ್ನು ಈಡೇರಿಸಬೇಕು. ಜಿಲ್ಲೆಯ ಕಿಸಾನ್ ಸಂಘದಿಂದಲೂ ಸರ್ಕಾರಕ್ಕೆ ಜಿಲ್ಲಾಧಿಕಾರಿ ಮೂಲಕ ಮನವಿ ಸಲ್ಲಿಸಲಾಗುತ್ತಿದೆ ಎಂದು ತಿಳಿಸಿದರು.

ಪ್ರಸ್ತುತ ಕರ್ನಾಟಕದಲ್ಲಿ ಪ್ರತಿ ಟನ್ ಕಬ್ಬಿಗೆ 3,000 ರೂ. ಬೆಲೆ ನೀಡಲಾಗುತ್ತಿದ್ದು, ಈ ದರವು ಅತ್ಯಂತ ಕಡಿಮೆ ಇದೆ. ಕೂಲಿ ಹಾಗು ಇತರೆ ವೆಚ್ಚಗಳು ಹೆಚ್ಚಿರುವುದರಿಂದ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಕಬ್ಬು ಬೆಳೆಗಾರರು ಕಬ್ಬು ಬೆಳೆಯನ್ನು ನಿಲ್ಲಿಸುವಂತಾಗಿದೆ. ಮಹಾರಾಷ್ಟ್ರದಲ್ಲಿ ಈಗಾಗಲೇ ಪ್ರತಿ ಟನ್‌ಗೆ 3,600 ನೀಡಲಾಗುತ್ತಿದ್ದು, ಕರ್ನಾಟಕದಲ್ಲಿಯೂ ಕನಿಷ್ಠ 3,500 (ಎಂಆರ್‌ಪಿ, ಎಂಎಸ್‌ಪಿ) ದರವನ್ನು ನಿಗದಿ ಮಾಡುವಂತೆ ಬೇಡಿಕೆ ಇಟ್ಟಿದ್ದಾರೆ. ಬೆಳಗಾವಿ, ವಿಜಯಪುರ, ಬಾಗಲಕೋಟೆ ಸೇರಿ ರಾಜ್ಯದ ಹಲವೆಡೆ ರೈತರು ಧರಣಿ ನಡೆಸುತ್ತಿದ್ದಾರೆ. ಅವರಿಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಆದ್ದರಿಂದ ರಾಜ್ಯದಾದ್ಯಂತ ಕಬ್ಬಿಗೆ ಪ್ರತಿ ಟನ್ 3,500 ರೂ. ಬೆಂಬಲ ಬೆಲೆ ನಿಗದಿಪಡಿಸುವಂತೆ ಕಬ್ಬು ನಿಯಂತ್ರಣ ಮಂಡಳಿ ಮೂಲಕ ಕ್ರಮ ಕೈಗೊಳ್ಳಬೇಕು. ಬೇಡಿಕೆ ಈಡೇರದಿದ್ದರೆ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದೆಂದು ಎಚ್ಚರಿಸಿದರು.

ಸಂಘದ ಅಧ್ಯಕ್ಷ ಮಲ್ಲಪ್ಪ, ಕುಮಾರಸ್ವಾಮಿ, ರಾಜು, ಚಂದ್ರಗೌಡ, ಸರೋಜಮ್ಮ, ಕೃಷ್ಣಕುಮಾರ್ ಹಾಜರಿದ್ದರು.



## ಗ್ರಾ.ಪಂ. ನೌಕರನ ಮೇಲೆ ಹಲ್ಲೆ ಆರೋಪ: ಪ್ರತಿಭಟನೆ



• ಪ್ರಜೋದಯ ವರದಿ

**ಕೊಣನೂರು:** ಅರಕಲಗೂಡು ತಾಲ್ಲೂಕು ಕೊಣನೂರು ಗ್ರಾಮ ಪಂಚಾಯಿತಿ ಗುತ್ತಿಗೆ ನೌಕರನ ಮೇಲೆ ವ್ಯಕ್ತಿಯೊಬ್ಬ ಹಲ್ಲೆ ನಡೆಸಿದ್ದಾರೆಂಬ ಆರೋಪ ಕೇಳಿಬಂದಿದೆ.

ಹೊರಗುತ್ತಿಗೆ ಆಧಾರದಡಿ ಕೆಲಸ ಮಾಡುತ್ತಿರುವ ನೀರುಗಂಟಿ ಹಾಗು ಸ್ವಚ್ಛತಾ ಕಾರ್ಮಿಕ ಕೆ.ಆರ್. ಶ್ರೀನಿವಾಸ್ ಮೇಲೆ ಮೋಹನ್ ಎಂಬಾತ ಗುರುವಾರ ಬೆಳಿಗ್ಗೆ ಕಸ ವಿಲೇವಾರಿ ವಿಚಾರವಾಗಿ ಗಲಾಟೆ ನಡೆಸಿ ಹಲ್ಲೆ ನಡೆಸಿದ್ದಾನೆಂದು ತಿಳಿದು ಬಂದಿದೆ. ಗಾಯಾಳು ಶ್ರೀನಿವಾಸ್ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ.

ಹಲ್ಲೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಐಟಿಯು ಕಾರ್ಯಕರ್ತರು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಆಗ್ರಹಿಸಿ ಪ್ರತಿಭಟಿಸಿದರು. ಸ್ವಚ್ಛತಾ ಕಾರ್ಮಿಕರ ಮೇಲೆ ಹಲ್ಲೆ ನಡೆಸುವುದು ಖಂಡನೀಯವೆಂದರು.

ಸಿಐಟಿಯು ತಾಲ್ಲೂಕಾಧ್ಯಕ್ಷ ಚಂದ್ರು, ಅವರು ಮಾತನಾಡಿ, ಗ್ರಾಮ ಪಂಚಾಯಿತಿ ನೌಕರರ ಮೇಲೆ ಹಲ್ಲೆ ಪ್ರಕರಣಗಳು ಮರುಕಳಿಸುತ್ತಿದ್ದು ನಾಗರಿಕ ಸಮಾಜ ತಲೆ ತಗ್ಗಿಸುವಂತಾಗಿದೆ. ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಮನವಿ ಸಲ್ಲಿಸಿದರು. ಗ್ರಾಮ ಪಂಚಾಯಿತಿ ಪೌರ ಕಾರ್ಮಿಕರಾದ ರಾಜು, ಇಂದ್ರ, ಗಣೇಶ, ಶಾರದ, ಮಂಜುಳಾ ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK